MESSAGE OF THE GOVERNOR

Re-Introduction of the Mysore Appropriation (Vote Account) Bill, 1967

Mr. SPEAKER.—I have to inform the House, that I have received a message from the Governor recommending that the Mysore Appropriation (Vote on Account) Bill, 1967, be introduced and considered in the Mysore Legislative Assembly.

Now, who will begin the debate?

MYSORE APPROPRIATION BILL, 1967

Motion to consider— Contd.

†ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಸನ್ಮಾನ್ಯ ಸಭಾಪತಿಗಳೇ, ನಾನು ನಮ್ಮ ಮುಂದಿರುವ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಾ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ನಿನ್ನೆ ದಿನ ಹಣಕಾಸಿನ ಸಚಿವರು ಭೂಕಂದಾಯವನ್ನು ರದ್ದುಮಾಡುವ ವಿಚಾರದಲ್ಲಿ ಅವರ ಅಭಿಪ್ರಾಯವನ್ನು ಸ್ಪಷ್ಟಪಡಿಸಿದರು. ಆದರೆ ಅದು ಅಡ್ಡಗೋಡೆಯ ಮೇಲೆ ದೀಪವಿಟ್ಟ ಹಾಗಿದೆ. ಟ್ರೆಜರಿ ಬೆಂಚಿನ ಸದಸ್ಯರು ಕೆಲವರು ವಿರೋಧ ಪಕ್ಷದವರು ಯೋಗ್ಯ ರೀತಿಯ ಸಲಹೆಯನ್ನು ಕೊಡುವುದಿಲ್ಲವೆಂದು ಹೇಳಿದರು. ಭೂಕಂದಾಯ ರದ್ದುಮಾಡುವ ಬಗ್ಗೆ ಸರಕಾರಕ್ಕೆ ರೈತರಮೇಲೆ ಕರುಣೆಯೇನಾದರೂ ಇದ್ದರೆ ಅವರಿಗೆ ಅನುಕೂಲ ಮಾಡಿಕೊಡಬೇಕೆಂಬ ಪ್ರಾಮಾಣಿಕ ಪ್ರಯತ್ನ ಅವರದಾಗಿದ್ದರೆ ಕೇವಲ ವಿರೋಧ ಪಕ್ಷದ ಬಾಯಿ ಮುಚ್ಚಿಸುವ ಮಾತನ್ನು ಹೇಳದೆ ರದ್ದುಮಾಡಬೇಕು. ಅದನ್ನು ಬಿಟ್ಟು ಭೂಕಂದಾಯ ಇರುವ ರೀತಿಯಲ್ಲಿ ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ಬರುವ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ ಎಂದು ಅರ್ಥ ಬರುವ ರೀತಿಯಲ್ಲಿ ಹೇಳಿರುವುದೇಕೆ? ಈ ರೀತಿಯಾಗಬಾರದು. ಪ್ರಾಮಾಣಿಕ ಪ್ರಯತ್ನ ಮಾಡುವುದಾದರೆ ಸಂಪೂರ್ಣವಾಗಿ ಈ ವಿಷಯವನ್ನು ಪರಿಶೀಲಿಸಿ ತೀರ್ಮಾನಮಾಡುವವರೆಗೆ ಭೂ ಕಂದಾಯದ ವಸೂಲಿಯನ್ನು ತಡೆಹಿಡಿಯಬೇಕೆಂದು ಸೂಚಿಸುತ್ತೇನೆ.

ಪಾನನಿರೋಧವನ್ನೂ ಸಡಿಲಮಾಡುವುದಾಗಿ ಹೇಳಿದ್ದಾರೆ. 'ಬೆಂಗಳೂರಿನಲ್ಲಿ ಕುಡಿ, ಹಳ್ಳಿಗಳಲ್ಲಿ ಬಿಡು' ಎಂಬ ನೀತಿ ಬೇಡ. ಕೆಲವರ ಮನೋಭಾವ ಅರ್ಥಮಾಡಿಕೊಳ್ಳಬಹುದು, ಸಡಿಲಮಾಡುವ ವಿಚಾರ ಕೇಳಿ ಕೆಲವರಿಗೆ ನೋವಾಗಿರಬಹುದು. ಜನರ ಮನಸ್ಸಿನಮೇಲೆ ಒಳ್ಳೆಯ ಪರಿಣಾಮವಾಗುವ ರೀತಿಯಲ್ಲಿ ನಿರೋಧವನ್ನು ಜಾರಿಗೆ ತರಬೇಕೇ ವಿನಾ ಸುಮ್ಮನೆ ಹಣ ಬರುವುದು ಕಡಮೆಯಾಗಬಾರದೆಂದು ಕೆಲವು ಕಡೆ ಬಿಟ್ಟು ಕೆಲವು ಕಡೆ ನಿರೋಧ ಮಾಡಬಾರದು. ಸಂಪೂರ್ಣವಾಗಿ ಪಾನನಿರೋಧವನ್ನು ಕೈಬಿಡುವುದು ಅಪೇಕ್ಷಣೀಯವಾಗಿದೆ.

ಇನ್ನು ಖಾಸಗಿ ಉದ್ದಿಮೆದಾರರು ಕೈಗಾರಿಕೆ ಸ್ಥಾಪಿಸಲು ಅವಕಾಶ ಕೊಡುವುದಾಗಿ ಹೇಳಿದ್ದಾರೆ, ಇದು ಸ್ವಾಗತಾರ್ಹವಾದುದು. ಆದರೆ ಲೈಸೆನ್ಸ್ ಮತ್ತು ಪರ್ಮಿಟ್ ಪದ್ಧತಿಯಿಂದಾಗಿ ಬೇಕಾದವರಿಗೆ ಲೈಸೆನ್ಸ್ ಕೊಡುವುದು, ಅವಕಾಶ ಕೊಡುವುದು ಮುಂತಾದ್ದನ್ನು ಮಾಡಲು ಸಾಧ್ಯವಿದೆ. ಆದುದರಿಂದ ಲೈಸೆನ್ಸ್ ಪರ್ಮಿಟ್ ಪದ್ಧತಿಯನ್ನು ತೆಗೆದರೆ ಆಗ ಉದ್ದಿಮೆದಾರರು ಖಾಸಗಿಯಾಗಿ ಬಂದು ಭಾಗವಹಿಸುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ.

ಈ ಸರಕಾರದ ಆರೋಗ್ಯ ನೀತಿಯು ಅರ್ಥವಾಗುವುದಿಲ್ಲ. ಏಕೆಂದರೆ, ಎಷ್ಟೋ ಕಡೆ ಆಸ್ಪತ್ರೆಯೇ ಇಲ್ಲ, ಕೊಟ್ಟಿರುವ ಆಸ್ಪತ್ರೆಗಳಲ್ಲಿ—ಹೆರಿಗೆ ಆಸ್ಪತ್ರೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಬಿಟ್ಟರೆ ಬೇರೆ ಕಡೆ ಡಾಕ್ಟರೇ ಇಲ್ಲ. ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲಿ 3 ಆಸ್ಪತ್ರೆಗಳಿವೆ, ಅಲ್ಲಿ 3—4 ವರ್ಷಗಳಿಂದ ಡಾಕ್ಟರೇ ಇಲ್ಲ, ಇದನ್ನು ತಿಳಿದರೆ ತಲೆತಗ್ಗಿಸಬೇಕಾಗುತ್ತದೆ.

ಮಿತಸಂತಾನದ ಯೋಜನೆ ಇದೆ, ಈ ಬಗ್ಗೆ ಸಮಗ್ರವಾದ ನೀತಿಯಿಲ್ಲ. ಏಕೆಂದರೆ ಅವಿವಾಹಿತರು ಕೂಡ ಮಂಕಿಯನ್ನು ಉಪಯೋಗಿಸುತ್ತಿದ್ದಾರೆ, ಸರಕಾರದವರು ಹಣ 17 ರೂಪಾಯೋ ಏನೋ ಕೊಡುತ್ತಿರುವುದರಿಂದ ಕೆಲವರು ವ್ಯಾಸೆಕ್ಟಮಿ ಮಾಡಿಸಿಕೊಳ್ಳಲು ಸಾಧ್ಯವಿದೆ. ಆದುದರಿಂದ ಧರ್ಮ

ಸಂಸ್ಥಾಪನೆ ಮಾಡಬೇಕಾದ ಈ ದೇಶದಲ್ಲಿ ಅನೀತಿ ಪ್ರಚಾರವಾಗುತ್ತಿದೆ. ಜನರಮೇಲೆ ಇದರಿಂದ ಒಂದು ಕೆಟ್ಟ ಪರಿಣಾಮವಾಗುತ್ತದೆ. ಮುಸ್ಲಿಮರು ಮತ್ತು ಕ್ರೈಸ್ತರು ಈ ಯೋಜನೆಯನ್ನು ತಿರಸ್ಕಾರ ಮಾಡುತ್ತಿದ್ದಾರೆ. ಆದುದರಿಂದ ಇದನ್ನು ಸಮಗ್ರವಾಗಿ ತರಲು ಅವಕಾಶವಿದ್ದರೆ ತರಬೇಕೆಂದು ಸೂಚಿಸುತ್ತೇನೆ.

ವಿದ್ಯಾಭ್ಯಾಸದ ನೀತಿಯ ಬಗ್ಗೆ ಸ್ವಾವಲಂಬಿಯಾದ ವ್ಯವಸ್ಥೆಯಿಲ್ಲ. ಇದು ಪರಾವಲಂಬಿಯಾಗಿದೆ. ವಿದ್ಯಾವಂತನಾದವನು ತನ್ನಕಾಲಮೇಲೆ ತಾನು ನಿಂತುಕೊಳ್ಳುವ ಶಕ್ತಿ ಪಡೆಯಲು ಅವಕಾಶವಾಗುವಂತೆ ವಿದ್ಯಾಭ್ಯಾಸ ಪದ್ಧತಿಯಲ್ಲಿ ತೀವ್ರವಾಗಿ ಬದಲಾವಣೆಯಾಗಬೇಕು. ಮೂಲಭೂತವಾಗಿ ಈಗಿರುವ ಪದ್ಧತಿಯನ್ನು ಪುನರ್ವಿಮರ್ಶೆಮಾಡಿ ಹೊಸ ಪದ್ಧತಿಯನ್ನು ಜಾರಿಗೆ ತರಲು ಅವಕಾಶವಿದೆ. ಸರಕಾರದ ಕಾಲೇಜುಗಳಲ್ಲಿರುವ ಲೆಕ್ಚರರುಗಳಿಗೆ 230-500 ರೂಪಾಯಿಗಳ ಸ್ಕೇಲಿದೆ, ಉಳಿದ ಕಡೆ ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ ಸಹಾಯ ಪಡೆದು 400—800 ರೂಪಾಯಿಗಳ ಸ್ಕೇಲನ್ನು ಕೊಡುತ್ತಿದ್ದಾರೆ. 5 ವರ್ಷಗಳವರೆಗೆ ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ ಸೇಕಡ 80 ರಷ್ಟು ಸಹಾಯ ನೀಡುವುದು, ಆಂಧ್ರ, ಕೇರಳ ಮುಂತಾದ ಕಡೆ ಇದನ್ನು ಪಯೋಗಿಸಿಕೊಂಡು ಹೆಚ್ಚಿನ ಸ್ಕೇಲನ್ನು ಕೊಡುತ್ತಿರುವಾಗ ನಮ್ಮ ಸರಕಾರ ಅದರ ಉಪಯೋಗ ಪಡೆದಿಲ್ಲ. ಆದುದರಿಂದ ಇದನ್ನು ಗಮನಿಸಿ ಎಲ್ಲರಿಗೂ ಒಂದೇ ಸ್ಕೇಲನ್ನು ಕೊಡಬೇಕೆಂದು ಸೂಚಿಸುತ್ತೇನೆ.

ಆಯುರ್ವೇದದ ಅಭಿವೃದ್ಧಿಗಾಗಿ, ಕಾಲೇಜುಗಳಿಗಾಗಿ ಕೇಂದ್ರ ಸರಕಾರ 93 ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಹೇಳಿದರೂ ಒಂದು ಪೈ ಕೂಡ ಅದಕ್ಕಾಗಿ ಖರ್ಚುಮಾಡಿಲ್ಲ.

ನಮ್ಮ ದೇಶದಲ್ಲಿ ನೀರಾವರಿ ಪ್ರದೇಶ ಸೇಕಡ 8.5 ಇದೆ, ಎಲ್ಲಾ ಯೋಜನೆಗಳೂ ಪೂರ್ಣವಾದರೆ ಸೇಕಡ 24 ಕ್ಕಿಂತ ಹೆಚ್ಚಾಗುವುದಿಲ್ಲ. ಯೋಜನೆಗಳಿಗಾಗಿ ಅಲಾಟ್ ಮಾಡಿದ ಹಣವನ್ನು ಖರ್ಚುಮಾಡುವುದಿಲ್ಲ. ಪ್ಲಾನು ಇರುವ ಪ್ರಕಾರ ಗುರಿ ಮುಟ್ಟದಿದ್ದರೆ ಯೋಜನೆಗಳಿಂದ ಫಲ ಸರಿಯಾಗಿ ದೊರೆಯುವುದಿಲ್ಲ. ಉತ್ಪತ್ತಿ ಹೆಚ್ಚಬೇಕಾದರೆ ಗುರಿಗೆ ತಕ್ಕಂತೆ ಯೋಜನೆ ಕೆಲಸ ಮಾಡಬೇಕು. ಹಾಗೆ ಮಾಡದಿದ್ದರೆ ಪ್ರಯೋಜನವಿಲ್ಲ. ಕೆಲವರಿಗಾಗಿ ನೀರಾವರಿ ಯೋಜನೆಗಳನ್ನು ಕೈಬಿಡದೆ ರಾಜ್ಯದ ಹಿತ ಲಕ್ಷಿಸಿ ಹಾರಂಗಿ ಕಂಬದಕಡ ಮುಂತಾದ ಯೋಜನೆಗಳನ್ನು ಕೈಕೊಂಡು ಜನರಿಗೆ ಹೆಚ್ಚು ಅನುಕೂಲಮಾಡಬೇಕು.

† ಶ್ರೀ ವಾಟಾಳ್ ನಾಗರಾಜ್:—ಸ್ವಾಮಿ, ನಾನು ಈ ವಿಷಯದಲ್ಲಿ ಮಾತನಾಡುತ್ತಾ ಬಹಳ ವ್ಯಥೆಯಿಂದ ಸರಕಾರವನ್ನು ಶಪಿಸಬೇಕಾಗಿದೆ ಎಂದು ನನಗನಿಸುತ್ತದೆ. ಮನುಷ್ಯ ಹುಟ್ಟಿದಲಾಗಾಯ್ತು ಸಾಯುವವರೆಗೆ ತೆರಿಗೆಯ ಹೊರೆಯಲ್ಲೇ ಸಾಯಬೇಕಾದ ಪರಿಸ್ಥಿತಿ ಇದೆ. ಕಾಂಗ್ರೆಸ್ ಸರಕಾರ ಜನರಮೇಲೆ ಹೊರಲಾರದಷ್ಟು ತೆರಿಗೆಯನ್ನು ಹೇರಿದೆ. ಈಗ ಬೆಂಗಳೂರು ಕಾರ್ಪೊರೇಷನ್ ಸರಕಾರದ ಆಡಳಿತದಲ್ಲಿದೆ. ಹಿಂದೆ ನಾನು ಕಾರ್ಪೊರೇಷನ್ ಸದಸ್ಯನಾಗಿದ್ದಾಗ ಮನುಷ್ಯ ಸಾಯುವವರೆಗೆ ತೆರಿಗೆ ಹೊರೆ ಹೊರಬೇಕಾಗಿದೆ, ಸತ್ತಮೇಲೆ ಆದರೂ ಹೆಣಕ್ಕೆ ತೆರಿಗೆ ಹಾಕಬೇಡಿ ಎಂದು ಹೇಳಿದೆ. ಅದರೆ ಹೆಣಕ್ಕೆ ಒಂದು ರೂಪಾಯಿ ತೆರಿಗೆ ಹಾಕುತ್ತಿದ್ದಾರೆ. ಇಂಥ ಅಧರ್ಮವಿರುವಾಗ ಬಹಳ ವ್ಯಥೆಯಿಂದ ಸರಕಾರವನ್ನು ಶಪಿಸಬೇಕಾಗಿದೆ. ಇನ್ನು ಮುಂದಾದರೂ ಹೆಣದಿಂದ ತೆರಿಗೆ ವಸೂಲುಮಾಡಿ ವೈಭವದ ಜೀವನವನ್ನು ನಡೆಸದೇ ಇರಲಿ ಎಂದು ವ್ಯಥೆಯಿಂದ ಈ ಮಂತ್ರಿಮಂಡಲಕ್ಕೆ ಎಚ್ಚರಿಕೆ ನೀಡುತ್ತಿದ್ದೇನೆ.

ಇನ್ನೊಂದು ವಿಷಯ ಆಸ್ಪತ್ರೆಯ ದುರಂತಕ್ಕೆ ಸಂಬಂಧಪಟ್ಟಿದೆ. ಈಗ ಬೇಕಾದಷ್ಟು ಹಣವನ್ನು ವೈದ್ಯಕೀಯ ಸೌಲಭ್ಯಕ್ಕಾಗಿ ಖರ್ಚುಮಾಡುತ್ತಿದ್ದಾರೆ. ನಾನು ಒಬ್ಬ ರೋಗಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಆ ಸಂಬಂಧವಾಗಿ ಒಂದು ದುರಂತವನ್ನು ಸಭೆಯ ಗಮನಕ್ಕೆ ತರಬೇಕಾಗಿದೆ.

ಆ ರೋಗಿಯನ್ನು ಕರೆದುಕೊಂಡುಹೋದಾಗ ಅತನನ್ನು ಪರೀಕ್ಷೆಮಾಡುವುದಕ್ಕೆ ಮೂರು ಆಸ್ಪತ್ರೆಗಳಿಗೆ ಕಳುಹಿಸಿ ಕೊನೆಗಳಿಗೆಯಲ್ಲಿ ಯಾವ ಆಸ್ಪತ್ರೆಯ ವೈದ್ಯರೂ ಪರೀಕ್ಷೆನಡೆಸದೇ ಹೆಣವನ್ನು ಆಸ್ಪತ್ರೆಯಿಂದ ತರತಕ್ಕ ಸಂಗತಿಯನ್ನುನೋಡಿ ಬಹಳ ದುಃಖದಿಂದ ಹೇಳುತ್ತಾ ಇದ್ದೇನೆ, ಈ ವೈದ್ಯಕೀಯ ಇಲಾಖೆಯವರು ಆಸ್ಪತ್ರೆಗಳನ್ನು ಸರಿಯಾದ ರೀತಿಯಲ್ಲಿ, ವ್ಯವಸ್ಥಿತವಾದ ರೀತಿಯಲ್ಲಿ ನಡೆಸುತ್ತಾ ಇದ್ದಾರೆಯೇ ಎಂದು ಅವರನ್ನು ಪ್ರಶ್ನೆ ಮಾಡುತ್ತಾ ಇದ್ದೇನೆ. ಅವರು ಖರ್ಚುಮಾಡತಕ್ಕ ಹಣ ಎಲ್ಲಾ ಅನ್ಯಾಯವಾಗಿ, ಅಕ್ರಮವಾಗಿ, ಅನೀತಿಯುತವಾದ ರೀತಿಯಲ್ಲಿ ಖರ್ಚಾಗುತ್ತಾ ಇದೆ ಎಂಬ ಅಂಶವನ್ನು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಇದೇ ರೀತಿಯಲ್ಲಿ ಸರ್ಕಾರದ ಹಣವನ್ನು ಇನ್ನೂ ಎಷ್ಟೋ ರೀತಿಯಲ್ಲಿ ಅನ್ಯಾಯವಾಗಿ, ಅಕ್ರಮವಾಗಿ, ಅನೀತಿಯುತವಾಗಿ ಖರ್ಚು

(ಶ್ರೀ ವಾಟಾಳ್ ನಾಗರಾಜ್)

ಮಾಡುತ್ತಾ ಇದ್ದೀರಿ ಎಂಬುದನ್ನು ನಾವು ಪದೇ ಪದೇ ಹೇಳುತ್ತಲೇ ಇದ್ದೇವೆ. ಸಾರ್ವಜನಿಕರ ಹಣವನ್ನು ಬಹಳ ಅಕ್ರಮವಾಗಿ ಖರ್ಚುಮಾಡುತ್ತಾಇದ್ದೀರಿ, ಅನ್ಯಾಯವಾಗಿ ಖರ್ಚುಮಾಡುತ್ತಾ ಇದ್ದೀರಿ, ಸರಿಯಾದಂತಹ ವ್ಯವಸ್ಥೆ ಇಲ್ಲ, ಅನೀತಿಯುತವಾದ ಖರ್ಚನಡೆಯುತ್ತಾ ಇದೆ. ಅನೇಕ ರೀತಿಯಲ್ಲಿ ಭ್ರಷ್ಟಾಚಾರ ನಡೆಯುತ್ತಾ ಇದೆ ಎಂದು ಅನೇಕ ಸಾರಿ ಹೇಳಿದ್ದೇವೆ. ಎಷ್ಟೇ ಹೇಳಿದರೂ ನಾವು ಬಹಳ ಸತ್ಯವಂತರು, ನೀತಿವಂತರು ಎಂದು ಹೇಳಿಕೊಳ್ಳುತ್ತಾ ಇದ್ದೀರಿ. ನೀವು ಮಾಡುತ್ತಿರುವ ಪ್ರತಿಯೊಂದು ಕೆಲಸವು ಅಕ್ರಮ, ಅನೀತಿ, ಅನ್ಯಾಯವಾಗಿ ನಡೆಯುತ್ತಾ ಇದೆ. ಇದು ನಿಜವಾದ ಸಂಗತಿ ಎಂದು ಬಹಳ ವ್ಯಥೆಯಿಂದ ಹೇಳುತ್ತ ಇದ್ದೇನೆ. ಮೊನ್ನೆ ಭೂಕಂದಾಯವನ್ನು ರದ್ದು ಮಾಡುವ ಬಗ್ಗೆ ಹಣಕಾಸಿನ ಸಚಿವರು ಜನತೆಗೆ ಒಂದು ಆಶ್ವಾಸನೆಯನ್ನು ನೀಡಿದರು. ಕಂದಾಯವನ್ನು ರದ್ದು ಮಾಡುತ್ತಾರೆ ಎಂದು ಹೇಳಿ ಪತ್ರಿಕೆಗಳಲ್ಲಿ ಬಂತು, ಅದನ್ನು ರೈತರು ಬಹಳ ಸಂತೋಷದಿಂದ ಸ್ವಾಗತ ಮಾಡಿದರು. ಆದರೆ ನಿನ್ನೆ ಮಾತನಾಡುವಾಗ ಅದರ ಬಗ್ಗೆ ಪರಿಶೀಲನೆ ಮಾಡಬೇಕು, ಕೂಲಂಕಷವಾಗಿ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದರು, ಜನತೆಗೆ ಈ ರೀತಿಯಾದ ಹೇಳಿಕೆಗಳನ್ನು ನೀಡಿ ಅನ್ಯಾಯವನ್ನು ಮಾಡುವುದಕ್ಕೆ ಬದಲಾಗಿ ಸುಮ್ಮನೆ ಇದ್ದಿದ್ದರೆ ಚೆನ್ನಾಗಿತು. ಇದರಿಂದ ನಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಈ ನಷ್ಟವನ್ನು ತುಂಬಿಕೊಳ್ಳುವುದಕ್ಕೆ ಒಂದು ಹೊಸ ವಿಧಾನವನ್ನು ಕಂಡುಹಿಡಿದಿದ್ದೇವೆ ಎಂಬ ಅಂಶವನ್ನು ಅವರು ಪ್ರಸ್ತಾಪಿಸಿದ್ದಾರೆ. ಅದೇನೆಂದರೆ, ಪಾನನಿರೋಧ ನೀತಿಯನ್ನು ಸಡಿಲ ಮಾಡುತ್ತೇವೆ ಎನ್ನುವುದು ಅಗಿದೆ. ಯಾರು ಪಾನನಿರೋಧವನ್ನು ಜಾರಿಗೆ ತರಬೇಕು, ಕುಡಿದು ಹಾಳಾಗುತ್ತಾ ಇದ್ದಂತಹ ಬಡ ಜನರ ಉದ್ಧಾರಮಾಡಬೇಕು ಎಂದು ಹೇಳುತ್ತಾ ಇದ್ದರೋ ಅವರೇ ಈಗ ಪಾನನಿರೋಧವನ್ನು ಸಡಲಪಡಿಸುತ್ತೇವೆ ಎಂದು ಹೇಳಿದರೆ ಅದರಿಂದ ಬಹಳ ವ್ಯಥೆಯಾಗುತ್ತದೆ. ಆದರಿಂದ 4 ಕೋಟಿ ರೂಪಾಯಿ ಉತ್ಪನ್ನವಾಗುತ್ತದೆ ಎಂದು ಹೇಳುತ್ತಾರೆ. ಉಳಿತಾಯಮಾಡತಕ್ಕ ಅನೇಕ ವಿಷಯಗಳನ್ನು ಅವರ ಗಮನಕ್ಕೆತರುತ್ತಾ ಇದ್ದೇವೆ, ಆದರೆ ಅದನ್ನು ಅವರು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಮಹಾತ್ಮಾ ಗಾಂಧಿಯವರನ್ನು ಗೋಡ್ಸೆ ಗುಂಡಿಕ್ಕಿ ಕೊಂದ, ಅವರು ಸತ್ತುಹೋದರು, ಇವತ್ತಿನ ದಿವಸ ಕಾಂಗ್ರೆಸ್ ಸರ್ಕಾರದವರು ಅವರ ನೀತಿಗೆ ಗುಂಡು ಇಡುತ್ತಾ ಇದ್ದಾರೆ, ಇಂತಹ ಕಾಂಗ್ರೆಸ್ ಸರ್ಕಾರ ಬಹಳ ದಿವಸ ಇರುವುದಿಲ್ಲ ಚ್ಯುತಿ ಹೊಂದುತ್ತದೆ ಎಂದು ಹೇಳುತ್ತೇನೆ. ಮಹಾತ್ಮಾ ಗಾಂಧಿಯವರು ಪ್ರತಿಪಾದಿಸಿದ ನೀತಿಯನ್ನು ಕೊಲೆಮಾಡಿ ಪಾನನಿರೋಧವನ್ನು ಸಡಿಲಪಡಿಸುವುದಕ್ಕೆ ಇವತ್ತಿನ ದಿವಸ ನೀವು ಹೊರಟಿದ್ದೀರಿ. ತಮಗೆ ನಾನು ಎಚ್ಚರಿಕೆ ಕೊಡುತ್ತಾ ಇದ್ದೇನೆ, ಪಾನನಿರೋಧವನ್ನು ಯಾವುದೇ ರೀತಿಯಲ್ಲಿ ಸಡಿಲಪಡಿಸುವುದಾದರೆ ನಿಮ್ಮ ಸರ್ಕಾರದ ವಿರುದ್ಧವಾಗಿ ನಾವು ಪ್ರಚಂಡವಾದ ಚಳುವಳಿಯನ್ನು ಹೂಡುತ್ತೇವೆ ಎಂದು ಹೇಳುತ್ತ ಇದ್ದೇನೆ. ಆ ರೀತಿ ನಿಮಗೆ ಉಂಟಾಗತಕ್ಕ ನಷ್ಟವನ್ನು ತುಂಬಿಕೊಳ್ಳಬೇಕಾಗಿದ್ದರೆ ಬರೀ ಪಾನನಿರೋಧದಿಂದ ಮಾತ್ರ ಅಗುವುದಿಲ್ಲ. ಪಾನ ನಿರೋಧವನ್ನು ಸಡಿಲಮಾಡಿರುವುದರಿಂದ ಬೆಂಗಳೂರು ನಗರದಲ್ಲಿ ಯಾವ ಪರಿಣಾಮವಾಗಿದೆ ಎಂಬುದನ್ನು ನಾವು ನೋಡುತ್ತಾ ಇದ್ದೇವೆ. ಸತಮಾನ್ಯ ಜನ ಕುಡಿದು ಹಾಳಾಗುತ್ತಾ ಇದ್ದಾರೆ. ಅವರ ನೈತಿಕ ಮಟ್ಟ ಅಧಃಪತನವಾಗುತ್ತಾ ಇದೆ. ಖರ್ಚು ಕಡಿಮೆ ಮಾಡಬೇಕೆಂದರೆ 22 ಜನ ಮಂತ್ರಿಗಳಿಗೆ ಬದಲಾಗಿ ಹತ್ತು ಜನ ಮಂತ್ರಿಗಳನ್ನು ಇಟ್ಟುಕೊಳ್ಳಿ ಎಂದು ಹೇಳುತ್ತೇನೆ. ಪಾನನಿರೋಧ ನೀತಿಯನ್ನು ಸಡಿಲಮಾಡಿ ಜನತೆಗೆ ಮೋಸಮಾಡಿ, ಅನ್ಯಾಯಮಾಡಿ, ಅಕ್ರಮಮಾಡಿ ಅವರ ನೀತಿಯನ್ನು ಕೊಲೆಮಾಡಿ ತಮ್ಮ ಒಂದು ವೈಭವವಾದ ಜೀವನವನ್ನು ನಡೆಸುವುದು ಖಂಡಿತವಾಗಿಯೂ ಧರ್ಮವಾದುದಲ್ಲ ಎಂದು ತಮಗೆ ಎಚ್ಚರಿಕೆ ಕೊಡುತ್ತಾ ಇದ್ದೇನೆ.

ಇವತ್ತಿನ ದಿವಸ ಪಂಜಾಬ್ ಸರ್ಕಾರದವರು ಏನು ಮಾಡಿದ್ದಾರೆ ಎಂಬುದನ್ನು ನೋಡಿ. ಮೇಲ್‌ಮನೆಯನ್ನು ರದ್ದು ಮಾಡಬೇಕೆಂಬ ಒಂದು ಸೂಚನೆಯನ್ನು ತಂದಿದ್ದಾರೆ. ಈ ಸರ್ಕಾರಕ್ಕೆ ಧೈರ್ಯ ಇದ್ದರೆ ಮೇಲ್ಮನೆಯನ್ನು ರದ್ದು ಮಾಡಿ, ಅದಕ್ಕೆ ಖರ್ಚಾಗತಕ್ಕ ಹಣವನ್ನು ಸರ್ಕಾರದವರು ಕಡಿಮೆ ಬೀಳತಕ್ಕ ಹಣಕ್ಕೆ ಉಪಯೋಗಿಸಲಿ ಎಂದು ನಾನು ಹೇಳುತ್ತಾ ಇದ್ದೇನೆ. ಬರೀ ಯಾರೋ ಒಬ್ಬರ ಹಿತಕ್ಕೆ, ಯಾರೋ ಒಬ್ಬರಿಗೆ ಏಜೆನ್ಸಿ ಕೊಡುವುದಕ್ಕೆ ಅವರು ಯಥೇಚ್ಛವಾಗಿ ಹಣ ಸಂಪಾದನೆ ಮಾಡಿಕೊಳ್ಳುವುದಕ್ಕೆ ಈ ಪಾನನಿರೋಧ ನೀತಿಯನ್ನು ಕೈ ಬಿಡುವುದು ಒಳ್ಳೆಯದಲ್ಲ. ಕಡ್ಡಾಯವಾಗಿ ಹೇಳುತ್ತೇನೆ, ಈ ಪಾನನಿರೋಧ ನೀತಿಯನ್ನು ಯಶಸ್ವಿಗೊಳಿಸುವುದಕ್ಕೆ ಸಾಧ್ಯವಿಲ್ಲದೇ ಇದ್ದರೆ ಈ ಸರ್ಕಾರಕ್ಕೆ ಆಡಳಿತ ಮಾಡುವುದಕ್ಕೆ ದಕ್ಷತೆ ಇಲ್ಲ, ಅವರು ಮಂತ್ರಿಮಂಡಲಕ್ಕೆ ರಾಜಿನಾಮೆ ಕೊಟ್ಟು ಹೊರಟು ಹೋಗಬೇಕು. ಇವರು ಮಾಡುತ್ತಾ ಇರುವ ಅನ್ಯಾಯವನ್ನು ನೋಡಿ ನನಗೆ ಬಹಳ ವ್ಯಥೆಯಾಗುತ್ತಾ ಇದೆ, ಅದಕ್ಕಾಗಿ ಅವರನ್ನು ಶಪಿಸಬೇಕಾಗಿದೆ. ಅಕ್ರಮವಾದ ಮಾರ್ಗಕ್ಕೆ ಜನತೆಯನ್ನು ಎಳೆಯಬೇಡಿ ಎಂದು ಹೇಳಿ ಸರ್ಕಾರದವರಿಗೆ ಎಚ್ಚರಿಕೆಯನ್ನು ಕೊಡುತ್ತಾ ಇದ್ದೇನೆ.

ಅಧ್ಯಕ್ಷರು.—ಶಾಪ ಕೊಡುವಂತಹ ಕೆಲಸ ಇಲ್ಲಿ ಮಾಡಬೇಡಿ, ಅದಕ್ಕೆ ಇಲ್ಲಿ ತಮಗೆ ಅಧಿಕಾರ ಇಲ್ಲ ಎಂದು ಹೇಳುತ್ತೇನೆ. ಇಲ್ಲಿ ಟೀಕೆ ಮಾಡುವುದಕ್ಕೆ ಅವಕಾಶವಿದೆಯೇ ವಿನಾ ಶಾಪ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಪೋಲೀಸ್ ಇಲಾಖೆಗೆ ಹಣವನ್ನು ಖರ್ಚು ಮಾಡುತ್ತಾ ಇದ್ದೀರಿ; ನನ್ನ ಸ್ವಂತ ಅನುಭವ ಸನ್ಮಾನ್ಯ ಪೋಲೀಸ್ ಮಂತ್ರಿಗಳಿಗೆ ಹೇಳುತ್ತೇನೆ. ಈ ಪೋಲೀಸ್ ಇಲಾಖೆಯಲ್ಲಿ ತಾವು ಚಳುವಳಿ ಮಾಡತಕ್ಕ ಕಾರ್ಮಿಕರನ್ನು ನೋಡಿಕೊಳ್ಳತಕ್ಕ ಒಂದು ಖಾತೆ ಏನಿದೆ ಅದನ್ನು ತಂದು ಸೇರಿಸಿದ್ದೀರಿ. ಶ್ರೀಮಾನ್ ನಿಜಲಿಂಗಪ್ಪನವರೇ ಈ ಖಾತೆಯನ್ನು ವಹಿಸಿಕೊಳ್ಳಬೇಕು. ಶ್ರೀಮಾನ್ ರಾಮರಾಯರಿಗೂ ಆ ಖಾತೆಗೂ ಏನೂ ಸಂಬಂಧವಿಲ್ಲ. ಶ್ರೀಮಾನ್ ರಾಮರಾಯರು ಚುನಾವಣೆಯಲ್ಲಿ ಜನಸಾಮಾನ್ಯರಿಂದ ಆರಿಸಿ ಬಂದಿಲ್ಲ, ಹಿಂದಿನ ಬಾಗಿಲಿನಿಂದ ಬಂದಿದ್ದಾರೆ. ಅಂಥವರು ಹೋಂ ಮಿನಿಸ್ಟರಾಗಿರುವುದು ಬಹಳ ವ್ಯಥೆಯಾಗುತ್ತದೆ. ಕಾರ್ಮಿಕರ ಕಷ್ಟ ಅವರಿಗೆ ಗೊತ್ತಿಲ್ಲ, ಸಾಮಾನ್ಯ ಜನರ ಕಷ್ಟ ಅವರಿಗೆ ಗೊತ್ತಿಲ್ಲ, ಚಳುವಳಿಗಾರರ ಕಷ್ಟ ಅವರಿಗೆ ಗೊತ್ತಿಲ್ಲ. ಅವರಿಗೆ ಗೊತ್ತಿರುವುದು ಪೋಲೀಸ್ ಅಧಿಕಾರಿಗಳಿಂದ ಅವರನ್ನು ಹಿಡಿದು ತರಿಸಿ ಜೈಲಿಗೆ ಕಳುಹಿಸತಕ್ಕದ್ದು, ಅವರನ್ನು ಲಾಕಪ್ಪಿಗೆ ಹಾಕಿಸತಕ್ಕದ್ದು.

ಅಧ್ಯಕ್ಷರು.—ಸಂವಿಧಾನದ ಪ್ರಕಾರ ಆರಿಸಿ ಬಂದು ಮಂತ್ರಿಮಂಡಲದಲ್ಲಿ ಇದ್ದಾರೆ ಹಾಗಿರುವಾಗ ನೀವು ಹೀಗೆ ಟೀಕೆ ಮಾಡುವುದು ಹೇಗೆ ಸರಿಯಾಗಿರುತ್ತದೆ ?

ಶ್ರೀ ವಾಟಾಳ್ ನಾಗರಾಜ್.—ಜನಸಾಮಾನ್ಯರಿಂದ ಆರಿಸಿ ಬಂದಿಲ್ಲ ಎಂದು ಹೇಳುತ್ತೇನೆ. ಕದ್ದು ಬಂದಿದ್ದಾರೆ, ಹಿಂದುಗಡೆಯಿಂದ ಬಂದಿದ್ದಾರೆ ಎಂದು ಹೇಳಿದೆ. ಅವರು ಜೈಲಿಗೆ ಹೋಗಿ ಅಲ್ಲಿ ನಡೆಯುತ್ತಾ ಇರತಕ್ಕ ದುರಂತ ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಒಳಗಡೆ ಯಾರಿಗೇ ಆಗಲಿ ಕೊಡತಕ್ಕ ರೊಟ್ಟಿ ಯಾವ ರೀತಿ ಇರುತ್ತದೆ ಎಂಬುದನ್ನು ಹೇಳುವುದಾದರೆ, ಒಂದು ಅಂಗೈ ಮಂದ ಇರುತ್ತದೆ. ದನಗಳೂ ಕೂಡ ಅದನ್ನು ತಿನ್ನುವುದಿಲ್ಲ. ಚಳುವಳಿಗಾರರನ್ನು, ಸತ್ಯಾಗ್ರಹಿಗಳನ್ನು ಹಿಡಿದುಕೊಂಡು ಬಂದು ಕಳ್ಳರ ಜೊತೆಯಲ್ಲಿ ಹಾಕಿ ಅಲ್ಲಿ ನಡೆಯುತ್ತಾ ಇರತಕ್ಕ ದುರಂತ, ಅನ್ಯಾಯ ಅಕ್ರಮ ಹೇಳುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ರಾಮರಾಯರು ಯಾವತ್ತೂ ಕೂಡ ಜೈಲಿಗೆ ಹೋಗಿಲ್ಲ ಅಲ್ಲಿನ ಪರಿಸ್ಥಿತಿಯನ್ನು ನೋಡಿಲ್ಲ. ಇವತ್ತಾದರೂ ನಾನು ಹೇಳಿದ ಮೇಲೆ ಜೈಲಿಗೆ ಹೋಗಿ ನೋಡಲಿ, ಜೈಲಿನ ಸುಧಾರಣೆ ಮಾಡಲಿ ಎಂದು ಈ ಮಾತನ್ನು ಹೇಳುತ್ತಾ ಇದ್ದೇನೆ. ಜೈಲಿನ ಸುಧಾರಣೆ ಖಂಡಿತವಾಗಿಯೂ ಆಗಿಲ್ಲ, ಅಲ್ಲಿ ಬಹಳ ಅನ್ಯಾಯ ನಡೆಯುತ್ತಾ ಇದೆ. ಇನ್ನು ಪೋಲೀಸ್ ಸ್ಟೇಷನ್‌ನಲ್ಲಿರತಕ್ಕ ಲಾಕಪ್‌ನಲ್ಲಿ ನಡೆಯುತ್ತಾ ಇರತಕ್ಕ ದುರಂತ, ಅಕ್ರಮ, ಅನ್ಯಾಯ ಅವರ ಕಾಲದಲ್ಲಿ ನಡೆಯದೇ ಇರಲಿ, ಅವರು ಗಾಂಧಿ ಶಿಷ್ಯರು. ಒಂದು ದಿವಸವಾದರೂ ಲಾಕಪ್ಪಿನ ಸಂದರ್ಶನ ಮಾಡಿ ಅಲ್ಲಿ ಸುಧಾರಣೆ ಮಾಡಬೇಕು ಎಂದು ಹೇಳುತ್ತೇನೆ.

ಮತ್ತೊಂದು ವಿಷಯ ಹೇಳಬೇಕಾಗಿದೆ. ಈಗ ಇರುವುದು ಕಾಂಗ್ರೆಸ್ ಸರ್ಕಾರ. ಈ ಪೋಲೀಸ್‌ನವರು ಹಾಕಿಕೊಳ್ಳತಕ್ಕ ಕಾಕಿ ಬಟ್ಟೆ ಇಂಗ್ಲೀಷ್‌ನವರು ಇದ್ದಾಗ ಗೊತ್ತುಮಾಡಿದ ಬಟ್ಟೆ, ಇದು ಗುಲಾಮಗಿರಿಯ ಲಾಂಛನ, ಇದನ್ನು ಬದಲಾಯಿಸಿ ಕಾವಿ ಬಟ್ಟೆಯನ್ನೋ ಅಥವಾ ಬೇರೆ ಯಾವುದಾದರೂ ಬಟ್ಟೆಯನ್ನೋ ಅವರು ಧರಿಸುವ ಹಾಗೆ ಮಾಡಿ ಎಂದು ಹೇಳುತ್ತೇನೆ. ಏಕೆಂದರೆ ಪೋಲೀಸ್‌ನವರ ಈ ಕಾಕಿ ಬಟ್ಟೆ ಕಂಡ ತಕ್ಷಣ ಇವರು ಜನಗಳ ಶತ್ರುಗಳು ಅನ್ನುವ ರೀತಿಯಲ್ಲಿ ಆಗಿದೆ. ಈ ಪರಿಸ್ಥಿತಿಯನ್ನು ಶ್ರೀಮಾನ್ ರಾಮರಾಯರು ಹೋಂ ಮಿನಿಸ್ಟರು ಆಗಿರುವ ಕಾಲದಲ್ಲಿ ಆದರೂ ಹೋಗಲಾಡಿಸುವುದಕ್ಕೆ ಈ ಬಟ್ಟೆಯನ್ನು ಬದಲಾಯಿಸಲಿ ಎಂದು ಅವರಿಗೆ ಈ ಸಭೆಯಲ್ಲಿ ಹೇಳುತ್ತಾ ಇದ್ದೇನೆ.

10-00 A.M.

†ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಗಳೇ, ನಾನು ಈಗ ಸಭೆಯ ಮುಂದೆ ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕ ಮೈಸೂರು ರಾಜ್ಯದ ಹಣವಿನಿಯೋಗ (ಲೇಖಾನುದಾನ)ಕ್ಕೆ ಸಂಬಂಧಪಟ್ಟ ವಿಧೇಯಕದ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಅದೇನು ಎಂದರೆ—ನೆನ್ನೆಯ ದಿವಸ ಮಾನ್ಯ ಹಣಕಾಸಿನ ಸಚಿವರು ನಾನು ಮಂತ್ರಿಮಂಡಲದ ಗಾತ್ರದ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದನ್ನು ಕುರಿತು ವಿವರಣೆಯನ್ನು ಕೊಡುತ್ತಿದ್ದ ಕಾಲದಲ್ಲಿ ಈಗಿರತಕ್ಕ ಮಂತ್ರಿಮಂಡಲವೇ ದೊಡ್ಡದಾಯಿತು ಅನ್ನುತ್ತಿರುವಾಗ ಇದರ ಗಾತ್ರವನ್ನು ಇನ್ನೂ ಹೆಚ್ಚುಮಾಡಬಹುದೆಂಬ ಅರ್ಥಬರುವಂತೆ ನೆನ್ನೆ ಮಾತನಾಡಿದ್ದಾರೆ. ಅದನ್ನು ಕೇಳಿ ನನಗೆ ಬಹಳ ಆತಂಕವುಂಟಾಗಿದೆ. ಜನರಲ್ ಅಡ್ಮಿನಿಸ್ಟ್ರೇಷನ್ನಿನಲ್ಲಿ ಈಗಾಗಲೇ ಖರ್ಚು ಬಹಳ

(ಶ್ರೀ ಎಸ್. ಶಿವಪ್ಪ)

ದುಬಾರಿಯಾಗಿದೆ ಎನ್ನುತ್ತಿರುವಾಗ ಮಾನ್ಯ ಹಣಕಾಸಿನ ಸಚಿವರು ಈ ರೀತಿ ಹೇಳಿದ್ದು ನಮಗೆಲ್ಲಾ ಬಹಳ ಆತಂಕವನ್ನುಂಟು ಮಾಡಿದೆ. ಮಂತ್ರಿಮಂಡಲವನ್ನು ಒಂದು ಶಾಸ್ತ್ರೀಯವಾದ ರೀತಿಯಲ್ಲಿ ರಚನೆ ಮಾಡುವುದಕ್ಕೆ ಬದಲಾಗಿ ಕಾಂಗ್ರೆಸ್ಸಿನವರು ತಮ್ಮ ಒಂದು ಪಕ್ಷದಲ್ಲಿರತಕ್ಕ ಒಳ ಕಿತ್ತಾಟವನ್ನು ಸರಿಪಡಿಸಿಕೊಳ್ಳುವುದಕ್ಕೂ ಮತ್ತು ಮಂತ್ರಿಮಂಡಲದ ಭದ್ರತೆಗೂ ಗಮನ ಕೊಡುತ್ತಾ, ತಮ್ಮ ಪಕ್ಷದ ಜನರನ್ನು ತೃಪ್ತಿಪಡಿಸುವುದಕ್ಕಾಗಿ ದೇಶದ ಹಣವನ್ನು ವ್ಯಯಮಾಡತಕ್ಕದ್ದು ಖಂಡಿತ ಸರಿಯಾದ್ದಲ್ಲ. ಒಬ್ಬ ಮಂತ್ರಿಯನ್ನು ನೇಮಕಮಾಡಿಕೊಳ್ಳಬೇಕಾಗಿದ್ದರೆ ಆತನಿಗೆ ಎಷ್ಟು ವರ್ಕ್ ಲೋಡ್ ಇರಬೇಕು ಎನ್ನತಕ್ಕ ವಿಚಾರದಲ್ಲಿ ನೆನ್ನೆಯ ದಿವಸ ಮಾನ್ಯ ಸದಸ್ಯರಾದ ಶ್ರೀ ಸಿದ್ದವೀರಪ್ಪನವರು ವಿವರವಾಗಿ ಮಾತನಾಡಿದ್ದಾರೆ. ಆದರೆ ಈ ದಿವಸ ಯಾವ ಮಂತ್ರಿಗಳಿಗೆ ಅಂಥ ಒಂದು ವರ್ಕ್ ಲೋಡ್ ಇರಬೇಕಾಗಿತ್ತೊ ಅದು ಇಲ್ಲದಿರುವಂಥ ಮಂತ್ರಿಗಳಿಗೆ ಏನು ಒಂದು ಪ್ರಾಮುಖ್ಯವಾದ ಕೆಲಸವನ್ನು ಕೊಟ್ಟಿದ್ದಾರೆಂದರೆ:—ಅವರು ಕನಿಷ್ಟಪಕ್ಷ ಒಬ್ಬಿಬ್ಬರು ಪಕ್ಷೇತರ ಸದಸ್ಯರನ್ನಾದರೂ ಅವರ ಪಕ್ಷಕ್ಕೆ ಸೇರುವಂತೆ ಮಾಡತಕ್ಕದ್ದೇ ಅವರಿಗೊಂದು ಪೋರ್ಟ್‌ಫೋಲಿಯೋ, ಬದುಕಾಗಿದೆ ಎಂದು ಕೇಳಿಬರುತ್ತಿದೆ. ಅವರ ಪಕ್ಷದಲ್ಲಿ ಹೇಗೂ ಒಡಕುಂಟಾಗಿದೆ, ಜನರು ಯಾವಾಗ ಎತ್ತತಿರುಗುತ್ತಾರೋ ತಿಳಿಯದು ಎಂಬ ಸಂಶಯಕ್ಕಾಗಿ ಅವರು ಈಗ ಕೆಲವು ಕೆಲಸವಿಲ್ಲದ ಮಂತ್ರಿಗಳಿಗೆ ಈ ಪಕ್ಷೇತರ ಸದಸ್ಯರನ್ನು ಅವರ ಕಾಂಗ್ರೆಸ್ ಪಕ್ಷಕ್ಕೆ ಸೇರುವಂತೆ ಮಾಡಬೇಕೆಂಬುದೇ ಅವರ ಮುಖ್ಯ ಕೆಲಸವಾಗಿದೆ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ.—ನಮ್ಮಲ್ಲಿ ಅಂಥ ಒಡಕೂ ಹುಟ್ಟಿಲ್ಲ, ನಾವು ಯಾವತ್ತೂ ಅದನ್ನು ಆಲೋಚನೆ ಮಾಡಿಲ್ಲ. ನಿಮಗೆ ಅದನ್ನು ಯಾರು ಹಾಗೆ ಹೇಳಿದ್ದಾರೋ ಅದು ನನಗೆ ತಿಳಿಯಲಿಲ್ಲ...

ಶ್ರೀ ಎಚ್. ಸಿದ್ದವೀರಪ್ಪ.—ಈಗಾಗಲೇ ಮುಖ್ಯ ಮಂತ್ರಿಗಳ ಗೃಹದಲ್ಲಿ ಜನರನ್ನು ಊಟ ಉಪಚಾರದ ನೆಪದಲ್ಲಿ ಕರೆಸುತ್ತಿರುವುದು ಪ್ರಾರಂಭವಾಗಿಲ್ಲವೇ ?

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ನಿಮ್ಮ ಅನುಯಾಯಿಗಳು ನಿಮ್ಮ ಹೆಸರಿನಲ್ಲಿ ಈ ಸಮಾರಂಭ ಕೂಟಗಳನ್ನು ನಡೆಸುತ್ತಿಲ್ಲವೇ, ಈ ಬೆಂಗಳೂರಿನಲ್ಲಿ ?

ಶ್ರೀ ಎಸ್. ನಿಜಲಿಂಗಪ್ಪ.—ಇನ್ನು ಶ್ರೀಮಾನ್ ಸಿದ್ದವೀರಪ್ಪನವರು ಹೀಗೆ ಹೇಳಿದರೆ ನಾನು ಏನು ಹೇಳಲಿ ! Mr. Wendel Wilkie has said somewhere : If you want to utter a falsehood give it a garnish of truth''. Even the garnish of truth is not available here.

ಶ್ರೀ ಎಸ್. ಶಿವಪ್ಪ.—ಒಂದು ಡೆಮೊಕ್ರೆಟಿಕ್ ಸಿಸ್ಟಂ ಪ್ರಕಾರ ಶಾಸನ ಸಭೆಗಳೂ ಮತ್ತು ಪಾರ್ಲಿಮೆಂಟುಗಳೂ ಕೆಲಸ ಮಾಡುತ್ತಿರುವ ಕಾಲದಲ್ಲಿ ದೇಶದಲ್ಲಿ ಬಹಿರಂಗವಾಗಿ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಸೋಲಿಸಿ ಇಲ್ಲಿಗೆ ಚುನಾಯಿತರಾಗಿ ಬಂದಿರತಕ್ಕಂಥ ಸದಸ್ಯರನ್ನು ನಿಮ್ಮ ಪಕ್ಷಕ್ಕೆ ಆಸೆಗಳನ್ನು ಹುಟ್ಟಿಸಿ ಸೇರಿಸಿಕೊಳ್ಳತಕ್ಕದ್ದು ಶ್ಲಾಘನೀಯವಾದದ್ದೇ, ಹೀಗಾದರೆ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯುತ್ತದೆಯೇ, ಬೆಳೆಯುತ್ತದೆಯೇ ಎಂಬುದನ್ನು ನೀವೇ ಆಲೋಚನೆ ಮಾಡಿ ನೋಡಿ. ನೀವು ನಿಮ್ಮ ಮಂತ್ರಿ ಪದವಿಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಸತ್ಯಾಂಶವನ್ನು ಮರೆಮಾಚುವುದು ಸರಿಯೇ ಎಂದು ಕೇಳುತ್ತೇನೆ ?

ಶ್ರೀ ಎಸ್. ನಿಜಲಿಂಗಪ್ಪ.—ನಾವು ಯಾರೂ ಹಾಗೆ ಹೇಳಿಲ್ಲ. ತಮಗೆ ಯಾರಾದರೂ ಹಾಗೆ ತಿಳಿಸಿದ್ದರೆ ಅದು ನಿಜವಾದ್ದಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಮುಖ್ಯ ಮಂತ್ರಿಗಳು ಹಾಲಿ ಇರತಕ್ಕ ಮಂತ್ರಿಮಂಡಲವನ್ನು ಇನ್ನು ಮುಂದೆ ಹೆಚ್ಚು ಮಾಡುವುದಿಲ್ಲ ಎಂಬ ಭರವಸೆಯನ್ನು ಕೊಟ್ಟರೆ ನಾನು ಯಾರು ಇದನ್ನು ಹೇಳಿದರು ಎಂಬುದನ್ನು ತಿಳಿಸುತ್ತೇನೆ.

ಶ್ರೀ ಎಸ್. ಶಿವಪ್ಪ.—ಏನೇ ಆಗಲಿ ನಾವು ಈ ಮುಂಗಡ ಪತ್ರಕ್ಕೆ ಒಪ್ಪಿಗೆಯನ್ನು ಕೊಡುವ ಮುನ್ನ ಸರ್ಕಾರದವರು ನಮಗೆ ಹಾಲಿ ಇರತಕ್ಕ ಮಂತ್ರಿಮಂಡಲವನ್ನು ವಿಸ್ತರಣೆ ಮಾಡುವುದಿಲ್ಲ, ಅಥವಾ ಅದನ್ನೆ ಬೇರೆ ಭಾಷೆಯಲ್ಲಿ ಹೇಳುವುದಾದರೆ, ಅಂಥ ರಾಜಕೀಯ ವ್ಯಭಿಚಾರವನ್ನು ಮಾಡುವುದಿಲ್ಲ ಎಂಬುದಾಗಿ ಒಂದು ಭರವಸೆಯನ್ನು ಅಂದರೆ ನಿಮ್ಮ ಪಕ್ಷವನ್ನು ಬಿಟ್ಟು ಬಹಿರಂಗವಾಗಿ ಚುನಾವಣೆಯಲ್ಲಿ ನಿಮ್ಮ ಅಭ್ಯರ್ಥಿಗಳನ್ನು ಸೋಲಿಸಿ ಗೆದ್ದು ಈ ಸಭೆಗೆ ಬಂದಿರತಕ್ಕವರನ್ನು ಪುನಃ ನಿಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂಬ ಭರವಸೆಯನ್ನು ಕೊಟ್ಟರೆ ನಾವು ಇದಕ್ಕೆ ಒಪ್ಪಿಗೆಯನು ಕೊಡುತ್ತೇವೆ.

Mr. SPEAKER.—I do know whether some canvassing is going on here. One must touch these things and close rather than develop them too much. If Members of the Opposition are trying to combine, I do not think there is anything wrong with the other side doing something. It does not come for a debate. Sri Sivappa has touched it; he may leave it at that.

†ಶ್ರೀ ಬೋಲ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ: ಕೃಷಿಗಾರರಿಗೆ ಸೌಲತ್ತುಗಳನ್ನು ಕೊಡತಕ್ಕ ವಿಚಾರದಲ್ಲಿ ನಮ್ಮ ಸರ್ಕಾರದವರ ಧೋರಣೆ ಯಾವ ರೀತಿಯಲ್ಲಿದೆ ಮತ್ತು ಅವರ ಅಭಿವೃದ್ಧಿಗಾಗಿ ಕೈಗೊಂಡಂಥ ಪಂಚವಾರ್ಷಿಕ ಯೋಜನೆಗಳ ಧೋರಣೆ ಯಾವ ರೀತಿಯಾಗಿದೆ ಎಂಬುದನ್ನು ವಿಮರ್ಶೆ ಮಾಡಿದರೆ ಅದು ಅಷ್ಟೇನೂ ಉತ್ತೇಜನಕರವಾಗಿಲ್ಲ ನಾನು ಬಹಳ ವಿಷಾದಿಂದ ಹೇಳಬೇಕಾಗಿದೆ. ಈ ಮಾನ್ಯ ಸಭೆಯಲ್ಲಿ ನಮ್ಮ ಅನೇಕ ಮುಖಂಡರುಗಳು ನಮ್ಮ ರಾಜ್ಯದಲ್ಲಿ ಕೃಷಿಗಾರರು ಶೇಕಡ 80ರಷ್ಟು ಇದ್ದಾರೆಂದು ಮಾತನಾಡಿದ್ದೂ ಮಾತನಾಡಿದ್ದೇ. ಆದರೆ ಅವರಿಗೆ ಇಲ್ಲಿಯವರೆಗೂ ನಾವು ಕೈಗೊಂಡಿರತಕ್ಕ ಯೋಜನೆಗಳಲ್ಲಿ ಎಷ್ಟರಮಟ್ಟಿನ ಸೌಲಭ್ಯಗಳು ಆ ಕೃಷಿಗಾರರಿಗೆ ಮುಟ್ಟಿವೆ ಎಂಬುದನ್ನು ಆಲೋಚಿಸಿದ್ದೇ ಆದರೆ, ಅವರ ಜೀವನ ಮಟ್ಟದಲ್ಲಿ ಅವರು ಸ್ವಲ್ಪವಾದರೂ ಮುಂದೆ ಬರಲಿಕ್ಕೆ ಸಾಧ್ಯವಾಗದಷ್ಟು ಸೌಲಭ್ಯಗಳನ್ನು ಸರ್ಕಾರ ಒದಗಿಸಿದೆ. ಇದನ್ನು ಎಲ್ಲಾ ಮಾನ್ಯ ಸದಸ್ಯರೂ ಒಪ್ಪಲೇ ಬೇಕು. ರೈತರು ಅವಿದ್ಯಾವಂತರಾದ ಜನರು. ಅವರು ಯಾವ ಒಂದು ರಾಜಕೀಯಕ್ಕೂ ಒಳಪಟ್ಟವರಲ್ಲ. ಈ ಸಭೆಯಲ್ಲಾಗಲೀ ಅಥವಾ ಇನ್ನಾವ ಬೇರೆ ಸಭೆಗಳಲ್ಲಾಗಲೀ ಬಂದು ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುವುದಕ್ಕೆ ಅವರಿಗೆ ಅವಕಾಶವಿಲ್ಲ. ಅವರ ಯೋಗಕ್ಷೇಮಗಳನ್ನು ಕೇಳತಕ್ಕ ಜನರೇ ಇಲ್ಲದಂತಾಗಿದೆ. ಹೀಗಾಗಿ ಸರ್ಕಾರ ಅವರನ್ನು ಪೂರಾ ಉದಾಸೀನದಿಂದ ಕಾಣುವುದಕ್ಕೆ ಅವಕಾಶವುಂಟಾಗಿದೆ. ಸಮಾಜದಲ್ಲಿ ಈ ದಿವಸ ಯಾವ ಯಾವ ವರ್ಗಗಳು ನಿಕಟವಾಗಿ ರಾಜಕೀಯಕ್ಕೆ ಹೊಂದಿಕೊಂಡಿವೆಯೋ ಅಂಥ ವರ್ಗದ ಜನರು ಮಾತ್ರ ಮುಂದಕ್ಕೆ ಬರುತ್ತಿದ್ದಾರೆ. ಅವರಿಗೆ ಸರ್ಕಾರದಿಂದ ಎಲ್ಲಾ ಅನುಕೂಲಗಳೂ ದೊರೆಯುತ್ತಿವೆ. ದೇಶದಲ್ಲಿ ಶೇಕಡ 80ರಷ್ಟು ಇರತಕ್ಕ ಕೃಷಿಗಾರರಿಂದ ಬರತಕ್ಕ ಆದಾಯದಲ್ಲಿ ಅವರಿಗೆ ಸರ್ಕಾರ ಈ ದಿವಸ ಶೇಕಡ 80ರಷ್ಟು ಉತ್ಪನ್ನವನ್ನು ಖರ್ಚು ಮಾಡಲಾಗುತ್ತಿದೆಯೇ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಅವರಿಗೆ ಅವರಿಂದ ಬರತಕ್ಕ ಉತ್ಪತ್ತಿಯಲ್ಲಿ ನಾಲ್ಕರ ಒಂದಂಶವನ್ನೂ ಕೂಡ ಖರ್ಚು ಮಾಡುತ್ತಿಲ್ಲ, ಅವರಿಗೆ ಪೂರಾ ಅನ್ಯಾಯವಾಗುತ್ತಿದೆ. ಆದರೆ ಇದೇ ಸಭೆಯಲ್ಲಿ ಕೆಲವರು ಇತ್ತೀಚೆಗೆ ಅವರು ಬೆಳೆಯತಕ್ಕ ಆಹಾರ ಧಾನ್ಯಗಳಿಗೆ ಹೆಚ್ಚಿನ ಬೆಲೆಗಳು ಬಂದುದರಿಂದ ಅವರ ಜೀವನವೂ ಈಗ ಉತ್ತಮಗೊಂಡಿದೆ ಎಂದು ಹೇಳಿದ್ದಾರೆ ಈ ಅಭಿಪ್ರಾಯವನ್ನು ವಿಚಾರ ಮಾಡಿ ನೋಡಿದ್ದೇ ಆದರೆ ಅದು ಸರಿಯಲ್ಲ, ನ್ಯಾಯವಾದ್ದಲ್ಲ ಎಂಬುದು ತಮಗೆಲ್ಲರಿಗೂ ವೇದ್ಯವಾಗುತ್ತದೆ. ನಿಜಕ್ಕೂ ಈ ದಿವಸ ಕೆಲವು ಮಟ್ಟಿಗೆ ಧಾನ್ಯಗಳ ಬೆಲೆ ಏರಿದೆ. ಆದರೆ ಸರ್ಕಾರದವರು ಅವರಿಗೆ ಕೊಡತಕ್ಕ ಧಾರಣೆಗೂ ಮತ್ತು ಮಾರುಕಟ್ಟೆಯ ಧಾರಣೆಗೂ ಅಜಗಜಾಂತರ ವ್ಯತ್ಯಾಸವಿದೆ. ಸರ್ಕಾರದವರು ಕಳೆದ 20 ವರ್ಷಗಳಲ್ಲಿ ಸುಮಾರು 1,500 ಕೋಟಿ ರೂಪಾಯಿಗಳಷ್ಟು ಆಹಾರ ಧಾನ್ಯಗಳನ್ನು ಹೊರಗಿನಿಂದ ಆಮದು ಮಾಡಿಕೊಂಡಿದ್ದಾರೆ. ಅದಕ್ಕೆ ಖರ್ಚು ಮಾಡಿರುವುದರಲ್ಲಿ ಅರ್ಧವನ್ನಲ್ಲ ನಾಲ್ಕರ ಒಂದು ಅಂಶ ಕೂಡ ಈ ವ್ಯವಸಾಯದ ಬಾಬಿಗೆ ಖರ್ಚು ಮಾಡಲಿಲ್ಲ. ಆದರೆ ರೈತನಿಗೆ ಧಾನ್ಯಗಳ ಬೆಲೆ ಎಷ್ಟು ಏರಿರುತ್ತದೋ ಅದಕ್ಕಿಂತಲೂ ಆತನು ಕೊಳ್ಳಬೇಕಾದ ಇನ್ನಿತರೇ ಸಾಮಾನುಗಳ ಬೆಲೆಯೂ ಅಷ್ಟೇ ಏರಿದೆ. ಅವನು ತಾನು ಬೆಳೆದುದನ್ನು ಕಡಮೆ ಬೆಲೆಗೆ ಮಾರಿ ತನಗೆ ಬೇಕಾದ ವಸ್ತುಗಳನ್ನು ಹೆಚ್ಚು ಬೆಲೆ ಕೊಟ್ಟುಕೊಳ್ಳಬೇಕಾಗಿದೆ. ಆದರೆ ಕಳೆದ 5 ವರ್ಷಗಳಲ್ಲಿ ಅವರ ಜೀವನ ಸ್ವಲ್ಪ ಸ್ವಲ್ಪ ಕುದುರುವುದಕ್ಕೆ ಬರುತ್ತಿದೆ ಅನ್ನುವಾಗ ಸರ್ಕಾರದವರು ಈ ಲೆವಿ ಕಾನೂನನ್ನು ತಂದು ಅವರ ಜೀವನ ಮಟ್ಟ ಹೆಚ್ಚಾಗದಂತೆ ಮಾಡಿದ್ದಾರೆ. ಇದರಿಂದ ಕೃಷಿಗಾರರಿಗೆ ಬಹಳ ನಿರಾಸೆಯುಂಟಾಗಿದೆ. ಸರ್ಕಾರದಲ್ಲಿ ಅವರಿಗೆ ವಿಶ್ವಾಸವಿಲ್ಲ. ಅವರು ಹೆಚ್ಚು ಬೆಳೆಯಬೇಕೆಂಬ ಹುಮ್ಮಸ್ಸು ಅವರಲ್ಲಿ ಈ ದಿವಸ ಇರುವುದಿಲ್ಲ. ಈ ದಿವಸ ಸರ್ಕಾರದವರು ತಂದಿರತಕ್ಕ ಲೆವಿ ಆಜ್ಞೆಯಿಂದ ಅವರ ಒಂದು ಮೂಲಭೂತವಾದ ಹಕ್ಕಿಗೆ ಧಕ್ಕೆಯನ್ನು ತಂದಿದ್ದಾರೆಂದು ಹೇಳದಿದ್ದರೆ ವಿಧಿಯಿಲ್ಲ. ಈ ವಿಚಾರದಲ್ಲಿ ಈಗಾಗಲೇ ಒಂದೆರಡು ರಿಟ್ ಅರ್ಜಿಗಳು ಸಹಾ ಹೈಕೋರ್ಟಿಗೆ ದಾಖಲಾಗಿವೆ. ವರ್ತಕರು ರೈತರ ಮನೆಗೇ ಬಂದು ಕೊಡತಕ್ಕ ಧಾರಣೆಗಿಂತ ಸರ್ಕಾರದವರು ಅದರ ಅರ್ಧ ಬೆಲೆಗೆ ರೈತರು ಬೆಳೆದುದ್ದನ್ನು ಮಾರಾಟ ಮಾಡಬೇಕೆಂದು ಬಲವಂತ ಮಾಡತಕ್ಕದ್ದು ನ್ಯಾಯವೇ ಎಂಬುದನ್ನು ಈ ಮಾನ್ಯ ಸಭೆಯವರೀಗ ನಿರ್ಣಯ ಮಾಡಬೇಕಾಗಿದೆ...

(ಶ್ರೀ ಬೋಲ ರಘುರಾಮ ಶೆಟ್ಟಿ)

[MR. DEPUTY SPEAKER in the Chair]

ರೈತರ ಮೇಲೆ ಲೆವಿ ದರವನ್ನು ಹಾಕುವಾಗ ಅವರ ಮನೆಯಲ್ಲಿ ಎಷ್ಟು ಜನರು ಇದ್ದಾರೆ, ಅವರ ಸಾಗುವಳಿ ಶಕ್ತಿ ಎಷ್ಟು ಉಂಟು, ನಿಜವಾಗಿ ಅವರ ಮೇಲೆ ಆ ರೀತಿ ಲೆವಿ ದರವನ್ನು ಹಾಕುವ ಅಗತ್ಯ ಉಂಟೇ ಎಂಬುದನ್ನು ಲೆಕ್ಕಮಾಡಿ ಇವರು ಅವರಿಗೆ ನೋಟೀಸ್ ಕೊಡುವುದಿಲ್ಲ. ಆ ರೀತಿ ನೋಟೀಸ್ ಕೊಡುವಾಗ ಇಷ್ಟು ಸಮಯದಲ್ಲಿಯೇ ಅದನ್ನು ಹಾಕಬೇಕು ಎಂಬುದಾಗಿ ಹುಕುಂ ಮಾಡುತ್ತಾರೆ. ಅದೂ ಅಲ್ಲದೆ ಆಹಾರ ಮಂತ್ರಿಗಳು ಲೆವಿ ಆರ್ಡರ್‌ನಲ್ಲಿ ಒಂದು ಡಿಕ್ಲರೇಶನ್ ಕೊಡಬೇಕು ಎಂಬುದಾಗಿ ಹೇಳಿದರು. ಅದು ಸತ್ಯ. ಆದರೆ ಆ ರೀತಿಯಲ್ಲಿ ಡಿಕ್ಲರೇಷನ್ ಕೊಡುವುದಕ್ಕೆ ಸಾಮಾನ್ಯ ರೈತನಿಗೆ ಖಂಡಿತವಾಗಿ ಸಾಧ್ಯವಿಲ್ಲ. ಅವನು ಅಷ್ಟಾಗಿ ವಿದ್ಯಾವಂತನಾಗಿರುವುದಿಲ್ಲ. ಅವನು ಕೋರ್ಟು ಕಚೇರಿಗಳಿಗೆ ಹೋಗುವ ಶಕ್ತಿ ಹೊಂದಿರುವುದಿಲ್ಲ. ಉತ್ತಮರ ಸಹಾಯದಿಂದ ಆ ಡಿಕ್ಲರೇಷನ್ನನ್ನು ಅವನು ಕೊಡಬೇಕಾಗುತ್ತದೆ. ಆ ಡಿಕ್ಲರೇಷನ್ ಕೊಡುವುದಕ್ಕೆ ಕೇವಲ 7 ದಿವಸಗಳ ಅವಧಿಯನ್ನು ಕೊಟ್ಟಿದ್ದಾರೆ. ರೈತನಾದವನು ಆ ಡಿಕ್ಲರೇಷನ್ನಿನ ವಿಷಯಗಳನ್ನು ಓದಿಸಿ ತಿಳಿದುಕೊಳ್ಳಬೇಕಾದರೇನೇ ಆ 7 ದಿವಸಗಳು ಹೋಗಿಬಿಡುತ್ತದೆ. ಅವರ ಒಂದು ವ್ಯಾಲ್ಯುಯೇಷನ್ನಿನ ಮೇಲೆ ರೈತನು ಲೆವಿಯನ್ನು ಕೊಡದಿದ್ದರೆ ಅವನಿಗೆ ಜುಲ್ಮಾನೆ ಬೇರೆ ಹಾಕುತ್ತಾರೆ. ಈಗಿನ ಪ್ಯಾಡಿ ಆರ್ಡರ್‌ನಿಂದ ನಿಜವಾಗಿ ರೈತನಿಗೆ ನ್ಯಾಯವಾದ ಹಾಗೂ ಮೂಲಭೂತವಾದ ಹಕ್ಕಿಗೆ ಧಕ್ಕೆ ಬರುತ್ತಿದೆ. ಈಗ ಈ ಕಾನೂನು ಇರುವುದರಿಂದ ಈ ಲೆವಿ ಹುಕುಂ ಅವರ ಮೇಲೆ ಜಾರಿಯಾಗುವಾಗ ರೈತನಾದವನು ಎಷ್ಟು ಸಾಗುವಳಿ ಮಾಡುತ್ತಾನೆ, ರೈತನ ಮನೆಯಲ್ಲಿ ಎಷ್ಟು ಜನರು ಕೆಲಸಕ್ಕೆ ಇದ್ದಾರೆ, ಆ ಸಾಗುವಳಿಗೆ ಅವನಿಗೆ ಖರ್ಚು ಎಷ್ಟಾಗುತ್ತದೆ ಎಂಬುದನ್ನು ತಿಳಿಯಲು ನಿಜವಾಗಿ ಸರ್ಕಾರದವರು ಇದರಲ್ಲಿ ಅವಕಾಶ ಮಾಡಬೇಕಾಗಿತ್ತು. ಆದರೆ ಇದರಲ್ಲಿ ಆ ರೀತಿ ಯಾಗಿಲ್ಲ. ಆದ್ದರಿಂದ ಈ ಲೆವಿ ಆರ್ಡರ್ ಎಷ್ಟರವರೆಗೆ ಜಾರಿಯಲ್ಲಿರುತ್ತದೋ ಅಲ್ಲಿಯವರೆಗೂ ರೈತನ ವಿಶ್ವಾಸವನ್ನು ಗಳಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅಷ್ಟರೊಳಗೆ ನಮ್ಮ ಆಹಾರ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದು ಇವರು ಹೇಳುವುದಾದರೆ ಅದು ನಿಜವಾಗಿ ತಮಾಷೆ ಮಾತಾಗುತ್ತದೆ. ಅದು ಒಂದು ವಾಸ್ತವಿಕವಾದ ಧೋರಣೆ ಆಗಲಿಕ್ಕಿಲ್ಲ. ಮಾನ್ಯ ಆಹಾರ ಮಂತ್ರಿಗಳು ಇಂತಹ ಅನ್ಯಾಯವಾದ ಕಾನೂನುಗಳನ್ನು ಬೇಗನೆ ತೆಗೆದುಹಾಕಬೇಕು. ಎಷ್ಟರವರೆಗೆ ಸರ್ಕಾರದವರು ಆಹಾರ ವಿಷಯದಲ್ಲಿ ಇಂತಹ ಒಂದು ನಿರ್ದಿಷ್ಟ ಧೋರಣೆಯನ್ನು ಇಟ್ಟುಕೊಳ್ಳುವುದಿಲ್ಲವೋ ಅಷ್ಟರವರೆಗೆ ನಮ್ಮ ಆಹಾರ ಸಮಸ್ಯೆಯು ಪರಿಹಾರವಾಗದು ಎಂದು ನಾನು ಹೇಳುತ್ತೇನೆ. ಇದಕ್ಕೆ ಈ ಸರ್ಕಾರವೇ ಕಾರಣ. ಸುಮಾರು 8-10 ವರ್ಷಗಳಿಂದಲೂ ಸರ್ಕಾರದವರು ಬಡತನವನ್ನು ನಿರ್ಮೂಲ ಮಾಡುತ್ತೇವೆಂದು ಹೇಳುತ್ತಾ ಬಂದಿದ್ದಾರೆ. ಆದರೂ ಅದರ ಬಗ್ಗೆ ಏನೂ ಮಾಡಿಲ್ಲ. 1,500 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನಮ್ಮ ದೇಶದ ಸರ್ಕಾರ ಕೇಂದ್ರ ಸರ್ಕಾರದಿಂದ ಆಹಾರ ಧಾನ್ಯಗಳನ್ನೇನೋ ತರಿಸಿದೆ. ಆದರೆ ಆ ಹಣವನ್ನು ಈ ದೇಶದಲ್ಲಿ ಕೃಷಿಕರಿಗೆ ಪ್ರಯೋಜನವಾಗುವ ರೀತಿಯಲ್ಲಿ ವಿನಿಯೋಗ ಮಾಡಿದ್ದರೆ ನಮ್ಮ ಆಹಾರ ಸಮಸ್ಯೆ ಎಂದೋ ಮಾಯವಾಗುತ್ತಿತ್ತು ಮತ್ತು ನಾವು ಹೊರಗಡೆಗೆ ಕಳುಹಿಸುವ ಒಂದು ಸಂದರ್ಭವೂ ಬರುತ್ತಿತ್ತು. ಆದರೆ ಈ ಸರ್ಕಾರಕ್ಕೆ ಅಂತಹ ಧೈರ್ಯವಾದ ನೀತಿಯನ್ನನುಸರಿಸಲು ನಿಜವಾದ ಒಂದು ಯೋಗ್ಯತೆ ಇದ್ದಿದ್ದರೆ, ಇದನ್ನು ಈಗ ವಿಮರ್ಶೆಮಾಡುವ ಸಂದಿಗ್ಧ ಕಾಲ ಅವರಿಗೆ ಬರುತ್ತಿರಲಿಲ್ಲ. ಆದರೆ ಈಗ ಅದು ಒದಗಿದೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ನಮ್ಮ ರೈತರ ಉತ್ಪತ್ತಿ ಜಾಸ್ತಿಯಾಗಬೇಕಾಗಿದೆ. ಮುಖ್ಯವಾಗಿ ರೈತರಿಗೆ ನೀರಾವರಿ ಸರಬರಾಯಿ ಸರ್ಕಾರದಿಂದ ಆಗಬೇಕು. ಸರ್ಕಾರದವರು ದೊಡ್ಡದೊಡ್ಡ ಯೋಜನೆಗಳಿಗೆ ಹಣವನ್ನು ಖರ್ಚುಮಾಡಿದರೆ ಅದರಿಂದೇನೂ ಪ್ರಯೋಜನವಿಲ್ಲ. ಇದರಿಂದ ಕೇವಲ ಭ್ರಷ್ಟಾಚಾರಕ್ಕೆ ಎಡೆಗೊಡುವ ಸಂದರ್ಭ ಸಿಕ್ಕುತ್ತದೆ. ಅಲ್ಲದೆ ನಿಜವಾಗಿ ಇದರಲ್ಲಿ ಇಡೀ ಭಾರತದ ರೈತರಿಗೆ ಪ್ರಯೋಜನವಾಗುವುದೇನೂ ಇಲ್ಲ. ಸಣ್ಣಪುಟ್ಟ ಕೆರೆ ಮತ್ತು ಬಾವಿಗಳನ್ನು ಕೇಳಿದರೆ ಅವುಗಳನ್ನು ಸೂಕ್ತವಾದ ಸ್ಥಳಗಳಲ್ಲಿ ತೋಡಬೇಕು. ಅಲ್ಲಿ ನೀರಿನ ಉಪಯೋಗವಾಗುವ ಹಾಗೆ ಪಂಪುಸೆಟ್ಟುಗಳನ್ನು ಅವರಿಗೆ ಒದಗಿಸಿಕೊಡಬೇಕು. ನನಗೆ ಗೊತ್ತಿರುವ ಹಾಗೆ ಅನೇಕ ವೇಳೆ ಸಾಗುವಳಿ ಮಾಡುವ ಕೃಷಿಕರಿಗೆ ಪಂಪುಸೆಟ್ಟುಗಳಿಗೆ ಬೇಕಾದ ಸಾಲವನ್ನು ರೈತರು ಪಡೆಯುವುದಕ್ಕೆ ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ಹೈರ್‌ಪರ್ಚೇಸ್ ಮೂಲಕ ಅವರಿಗೆ ಸರ್ಕಾರದವರು ಪಂಪುಸೆಟ್ಟುಗಳನ್ನು ಒದಗಿಸಿಕೊಡಬೇಕು. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಗ್ರಾಮಾಧಿಕಾರಿ

ಗಳನ್ನು ತೆಗೆಯುವ ಒಂದು ಕಾನೂನನ್ನು ತಂದಿದ್ದಾರೆ, ಆ ಪ್ರಕಾರ ಶ್ಯಾನುಭೋಗರನ್ನು ಮತ್ತು ಪಟೇಲರನ್ನು ಆದಷ್ಟು ಬೇಗ ತೆಗೆಯಬೇಕು ಎಂಬುದಾಗಿ ಹೇಳಿದ್ದಾರೆ. ಈ ಮಾನ್ಯ ಸಭೆಗೆ ನಾನು ಈ ವಿಚಾರದಲ್ಲಿ ಒಂದು ವಿನಂತಿ ಮಾಡುತ್ತೇನೆ. ಮಂಗಳೂರು ಜಿಲ್ಲೆಯ ವಿಷಯವಾಗಿ ನಾನು ಮಾತನಾಡುವಾಗ ಅಲ್ಲಿರುವ ಶಾನುಭೋಗರು ಮತ್ತು ಪಟೇಲರು ಚೆನ್ನಾಗಿ ಕೆಲಸ ಮಾಡಿರುವುದರಿಂದ ಅಲ್ಲಿನ ರೆವಿನ್ಯೂ ಇಲಾಖೆಯಲ್ಲಿ ಕೆಲಸ ಗ್ರಾಮದ ಮಟ್ಟದಲ್ಲಿ ಒಳ್ಳೆಯ ರೀತಿಯಿಂದ ನಡೆಯುತ್ತಾ ಇದೆ. ಅಷ್ಟೇ ಅಲ್ಲ. ಅವರು ಸರ್ಕಾರಕ್ಕೆ ಇಡೀ ಜೀವಮಾನವೆಲ್ಲ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಅಂತಹ ಅನುಭವವುಳ್ಳ ವ್ಯಕ್ತಿಗಳನ್ನು ತೆಗೆಯಬೇಕೆಂದು ಹೇಳುವುದು ಖಂಡಿತವಾಗಿ ನ್ಯಾಯವಲ್ಲ. ಮಾನವೀಯ ದೃಷ್ಟಿಯಿಂದ ನೋಡಿದರೆ ಅದು ಬಹಳ ಅನ್ಯಾಯವಾಗುತ್ತದೆ. ಆದ್ದರಿಂದ ನಾನು ಮತ್ತೊಂದು ಸಾರಿ ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಸರ್ಕಾರದವರು ಆ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಮುಖ್ಯವಾಗಿ ರೈತರ ಏಳಿಗೆಗೋಸ್ಕರ ಅದನ್ನು ನ್ಯಾಯವಾಗಿ ಮಾಡಿದರೆ ನಮ್ಮ ದೇಶದ ಅನೇಕ ಸಮಸ್ಯೆಗಳು ಪರಿಹಾರವಾಗುವುದಕ್ಕೆ ಸಾಧ್ಯ ಉಂಟು. ಆಗ ನಾವು ಮಾಡಿದಂಥ ಪಂಚವಾರ್ಷಿಕ ಯೋಜನೆಗಳಿಂದ ಪ್ರಯೋಜನ ಸಿಗಬಹುದು ಎಂಬುದಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(*English version of the Hindi Speech*).

Sri CHANDRAKANTH GURUPADAPPA (Yelburga).—This Backward area is still dragged towards backwardness. The budget presented by the hon. Finance Minister does not speak of any developmental programmes towards the development and uplift of the most backward area of Mysore State *i.e.*, the Bidar District.

At the very outset, Sir, there is no plan and provision for the development of Roads in Bidar proper as well as in rural areas. All tall promises of the Government for the improvement of rural communications are not materialised. Let me take up for example the case of village Manahalli with a population of about 7,000 people. It does not have even a jeepable road connecting to headquarter Bider. In rainy season, as there are no reads, this village actually becomes an island. People of that village cannot come to their headquarters for official and private work. Condition of roads in Bidar is still worst. During summer the peculiar red colour of the soil at Bidar makes every thing, of its own colour, and results in the causation of blindness on path for the pedestrians. Bidar also lacks hospital and free medical said for the poor and the poverty striken people. This facility is aforded to the officials and those whose influence is counted to a great extent. The poor partients with serious diseases who need immediate medical aid will have to travel about 15 miles or even more. The case of village Manahalli and Bagdal is the same. But to our great surprise Government had been a silent spectator to it.

The are no big industries and no samll scale industries as well, which can solve the increasing problem of umployment. People, due to increase in unemployment, have started leaving Bidar in search of their livelihood. The so called Bidar Sahakra Sakkare Kharkhane, Limited Bidar, which is much heard about is yet to come up.

It also lacks schools and where there are schools, the standard of education is going down and down. This is definitely very well speaks

(SRI CHANDRAKANTH GURUPADAPPA)

the wrong administration of the Government. The S.S.L.C. results of the Governmant Multipurpose High School, Bidar have gone down to as low as 7 per ceut; this deprives the Education Department of its claim of high standard of education. But it is to be noted as a sorry state of affairs prevailing. Lack of posting of teachers permanently in causing inconvenience to the students in their studies and thereby the students are left to their fate.

Drinking water supply is also very much depressing as per schedule, one should get at least 7 gallons of water a day but one hardly gets 2 gallons. The assurance given by the hon. Chief Minister just before the General Election to take up 'Manjara' project immediately and accord people at Bidar adequate supply of drinking water, yet not to be seen.

The communal rioting that took place on 15-2-1967 *i.e.* on the date of polling of Bidar is not still inquired into despite submitting memorandum to the hon. Chief Minister just after the incident. Hence I urge on the floor of this House to form a committee to inquire into the matter and the culprit be dealt with according to law.

The aforesaid grievances be immediately reddressed.

† ಶ್ರೀ ಹಾಜಿ ಶಿವಣ್ಣ (ತರಿಕೆರೆ).—ಸನ್ಮಾನ್ಯ ಸಭಾಪತಿಗಳೇ, ಈ ಕಾಂಗ್ರೆಸಿನವರು ತಮಗೆ ಮೆಜಾರಿಟಿ ಇದೆ ಎಂದು ತಮ್ಮ ಅಧಿಕಾರ ವರ್ಗದಿಂದ ಆಡಳಿತವನ್ನು ಹೇಗೆ ನಡೆಸಿಕೊಂಡು ಬರುತಿದ್ದಾರೆಂಬುದನ್ನು ನಾನು ಒಂದೆರಡು ಮಾತುಗಳಲ್ಲಿ ಹೇಳಬಯಸುತ್ತೇನೆ. ಇವತ್ತಿನ ದಿವಸ ಇವರು ಜನರ ಹಿತದೃಷ್ಟಿಯಿಂದ, ಜನರ ಉಪಯೋಗಕ್ಕಾಗಿ, ದೇಶದ ಹಿತರಕ್ಷಣೆಗಾಗಿ ಏನೂ ಕೆಲಸಮಾಡು ್ತಲ್ಲವೆಂದು ನಾನು ಹೇಳಬಯಸುತ್ತೇನೆ.

ಈಗ ಮರಾಮತ್ ಇಲಾಖೆಯ ವಿಷಯ ಹೇಳುವುದಾದರೆ, ರೈಟ್ ಬ್ಯಾಂಕ್ ಚಾನಲ್‌ನಲ್ಲಿ 3-4 ವರ್ಷದ ಕೆಳಗೆ ಕಟ್ಟಿದಂತಹ ಒಂದು ಕಾಗೆಹಳ್ಳ ಎಂಬ ಅಚ್ಚುಕಟ್ಟು ಒಡೆದು ಬಿದ್ದುಹೋಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇದರಿಂದ ಇಲ್ಲಿಯ ಅಧಿಕಾರಿ ವರ್ಗದವರಿಂದ ಎಷ್ಟು ದಕ್ಷತೆಯಿಂದ ಕೆಲಸಕಾರ್ಯಗಳು ಸುಲಲಿತವಾಗಿ ನಡೆಯುತ್ತವೆ ಎಂಬುದನ್ನು ತಿಳಿಯಬಹುದು. ಇವರು ದೇಶದ ದುಡ್ಡನ್ನು ಎಷ್ಟು ಅವ್ಯವಸ್ಥೆಯಾದ ರೀತಿಯಲ್ಲಿ ಖರ್ಚು ಮಾಡುತ್ತಿದ್ದಾರೆ ಎಂಬದನ್ನು ಬಹಳ ಸಂಕಟದಿಂದ ಹೇಳಬೇಕಾಗಿದೆ. ನಮ್ಮ ತಾಲೋಕಿನಲ್ಲಿ ಒಂದು ಜಂತಳ ಎಂಬ ಒಂದು ಕಟ್ಟೆಯನ್ನು ಕಟ್ಟುತ್ತಿದ್ದಾರೆ. ಇದು 56-57 ರಲ್ಲಿ ಪ್ರಾರಂಭವಾದರೂ ಇಲ್ಲಿಯವರಿಗೆ ಮುಕ್ಕಾಲು ಭಾಗ ಕೂಡ ಆಗಿಲ್ಲ. ಇದು ಬರೇ ಕಂಟ್ರಾಕ್ಟರನ್ನು ಬದಕಿಸಲಿಕ್ಕೆ ಕಟ್ಟುತ್ತಿದ್ದಾರೆಂದು ಕಾಣುತ್ತಿದೆ. ಇದು ಪ್ರಾರಂಭವಾದಾಗ ಇದಕ್ಕೆ 60 ಲಕ್ಷ ರೂಪಾಯಿ ಅಂದಾಜು ಆಗಿತ್ತು. ಆದರೆ ಈಗ ಕೋಟ್ಯಾಂತರ ರೂಪಾಯಿ ಖರ್ಚಾದರೂ ಕೂಡ ಜನರಿಗೆ ಇದರಿಂದ ಯಾವ ಪ್ರಯೋಜನವೂ ಆಗಿಲ್ಲ. ಜನರು ಅದನ್ನು ನೆಚ್ಚಿಕೊಂಡು ಇಲ್ಲಿಯವರಿಗೆ ಇಟ್ಟುಕೊಂಡಿದ್ದ ಆಶೆ ಆಕಾಂಕ್ಷೆಗಳು ಎಲ್ಲಾ ಮಣ್ಣು ಪಾಲಾಗಿ ಹಾಳಾಗಿ ಹೋಗಿವೆ. ಕಳೆದ ವರ್ಷ ಕೂಡ ಅಲ್ಲಿ ನೀರಿಲ್ಲದೆ ಕೊಟ್ಯಾಂತರ ರೂಪಾಯಿ ಯಷ್ಟು ಬೆಲೆ ಬಾಳುವ ಅಡಿಕೆ ತೋಟಗಳು ಎಲ್ಲಾ ಒಣಗಿ ಹೋಗಿವೆ. ಇನ್ನಾದರೂ ಎಷ್ಟು ಕಾಲದಲ್ಲಿ ಅದು ಪೂರ್ತಿಯಾಗಿ ಜನರಿಗೆ ಅನುಕೂಲವಾಗುತ್ತಿದೆಯೋ ಎಂದು ಗೊತ್ತಾಗಿಲ್ಲ.

ಇನ್ನೊಂದು ಲೆವಿ ವಿಷಯ. ಜನರಿಂದ ಇವತ್ತಿನ ದಿವಸ ಕಡ್ಡಾಯವಾಗಿ ಭತ್ತವನ್ನು ವಸೂಲು ಮಾಡುತ್ತಿದ್ದಾರೆ. ಕೆಲವು ಮನೆಗಳಲ್ಲಿ ಪೋಲೀಸಿನವರು ಹೋಗಿ ಭತ್ತವನ್ನು ವಸೂಲು ಮಾಡಿ, ದೇಶಕ್ಕೆ ಹಂಚತಕ್ಕ ನಿಯಮವನ್ನು ಇಟ್ಟುಕೊಂಡಿದ್ದಾರೆ. ಕಳೆದ ವರ್ಷ ಶಿವಮೊಗ್ಗಾ ಜಿಲ್ಲೆಯ ಸೊರಬದ ಒಂದು ಮಿಲ್ಲಿನ ಗೊಡೌನಿನಲ್ಲಿ 750 ಕ್ವಿಂಟಾಲ್ ಭತ್ತ ಮಾಯವಾದದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಆದರೆ ಅದರ ಬಗ್ಗೆ ಈ ವರೆಗೂ ಯಾವ ಒಂದು ಕ್ರಮವನ್ನೂ ಸರ್ಕಾರದವರು ತೆಗೆದುಕೊಂಡಿದ್ದಾರೆಂದು ತಿಳಿದಿಲ್ಲ. ಆದ್ದರಿಂದ ಈ ಲೆವಿಯನ್ನು ತೆಗೆದು

ಹಾಕುವುದು ಸೂಕ್ತ. ಈವತ್ತಿನ ದಿವಸ ಬಡಬಗ್ಗರ ಮೇಲೆ ಈ ಸಂಬಂಧವಾಗಿ ನೂರಾರು ಕೇಸುಗಳನ್ನು ಹಾಕಿ ಹಿಂಸೆ ಕೊಡುತ್ತಿರುವುದನ್ನು ತಪ್ಪಿಸಬೇಕು. ಸರ್ಕಾರಕ್ಕೆ ಇದರಿಂದ ತೊಂದರೆಯಾದರೂ ಚಿಂತೆ ಇಲ್ಲ, ಸರ್ಕಾರದವರು ಇದನ್ನು ಕೈಬಿಟ್ಟರೆ ಜನರಿಗೆ ಬಹಳ ಅನುಕೂಲವಾಗುತ್ತದೆ. ಈಗ ವಸೂಲು ಮಾಡುತ್ತಿರುವ ಭತ್ತದಲ್ಲಿ ಕೂಡ ಅರ್ಧ ಭಾಗದಷ್ಟು ಮಾತ್ರ ಸರ್ಕಾರಕ್ಕೆ ಬರುತ್ತದೆ, ಉಳಿದವುಗಳು ಎಲ್ಲಿಯೋ ಹೋಗಿ ಯಾರ್ಯಾರ ಮನೆಗಳಿಗೊ ತಲಪುತ್ತವೆ. ಅಂತವರ ಮೇಲೆ ಸರ್ಕಾರಕ್ಕೆ ಕ್ರಮತೆಗೆದುಕೊಳ್ಳಲೂ ಶಕ್ತಿ ಇಲ್ಲ. ಇದರಿಂದಾಗಿ ಒಂದು ದುರ್ವ್ಯವಸ್ತೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ನಾನಾದರೂ ಹೇಳಬಯಸುತ್ತೇನೆ.

ಇನ್ನು ಕಂದಾಯ ರದ್ದು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಹೀಗೆ ಮಾಡಿ ಬೇರೆ ಯಾವ ರೂಪದಲ್ಲಾದರೂ ಕಂದಾಯ ಹಾಕುವುದಾದರೆ ಈಗ ಇರುವ ಕಂದಾಯವನ್ನೂ ಬಿಡುವುದರ ಅವಶ್ಯಕತೆಯೇ ಇಲ್ಲವೆಂದು ಹೇಳಬಯಸುತ್ತೇನೆ.

ಈಗ ಈ ಪ್ರೊಹಿಬಿಷನನ್ನು ಇಡುತ್ತಾರೋ ತೆಗೆಯುತ್ತಾರೋ ಎಂದು ಗೊತ್ತಾಗಲಿಲ್ಲ. ಕೆಲವರು ಮಂಗಳೂರಿನವರು ಹೇಳುತ್ತರೆ—ಅಲ್ಲಿ ಇದನ್ನು ಬಸಪ್ಪ ಎಂಬ ಹೆಸರಿನಿಂದ ಕರೆಯುತ್ತಾರೆಂದು. ಈ ಹೆಂಡ ಕುಡುಕರು ಇದ್ದರೆ ಓಡಾಡುವುದೇ ಬಹಳ ಕಷ್ಟ ಚುನಾವಣೆಯ ಕಾಲದಲ್ಲೂ ಈ ಹೆಂಡ ಕುಡುಕರಿಂದಾಗಿ ಬಹಳ ತೊಂದರೆಯಾಗಿದೆ ಮತ್ತು ಓಡಾಡುವುದೇ ಕಷ್ಟವಾಗಿತ್ತು. ಆ ರೀತಿ ಬೇಕಾದಷ್ಟು ಅತ್ಯಾಚಾರಗಳು ನಡೆಯುತ್ತಿವೆ. ಆದ್ದರಿಂದ ಇದನ್ನು ಸುಲಲಿತವಾಗಿ ನಡೆಸುವುದಕ್ಕೆ ಸಾಧ್ಯವಿಲ್ಲ. ಇದನ್ನು ರದ್ದು ಮಾಡಿ ಬಡ ಜನರಿಂದ ಹಣ ವಸೂಲು ಮಾಡುವ ಆಡಳಿತವನ್ನು ತರಬೇಡಿ. ಬೇಕಾದರೆ, ಹಿಂದೆ ಇದ್ದಂತೆ ಒಂದು ಆಣೆ, ಎರಡು ಆಣೆಗೆ ಸೀಸೆ ಸಿಕ್ಕುತ್ತಿದ್ದಹಾಗೆ, ಮಾಡುವ ಏರ್ಪಾಡು ಮಾಡಿ, ಬಡವರಿಗೆ ಕುಡಿಯಲಿಕ್ಕೆ ಒಂದು ಅವಕಾಶ ಮಾಡಿಕೊಡಿ; ಮತ್ತು ಅದರಿಂದ ದೇಶಕ್ಕೆ ಏನೂ ತೊಂದರೆಯಾಗುವುದಿಲ್ಲ.

ಇನ್ನು ಈ ಸೊಸೈಟಿಗಳಲ್ಲಿ ಪರದೇಶದಿಂದ ಆಹಾರವನ್ನು ತಂದು ಹಂಚುತ್ತಿದ್ದಾರೆ. ಅದನ್ನು ಹಂಚುವಾಗಲೂ ಬಹಳ ಅನ್ಯಾಯವಾಗುತ್ತಿದೆ. ಅದು ಎಷ್ಟುಮಟ್ಟಿಗೆ ಆಗುತ್ತದೆ ಎಂದರೆ, ಸುಮಾರು 43-45 ರೂಪಾಯಿಗೆ ಜೋಳವನ್ನು ತಂದರೆ, ಕೆಲವು ಪರ್ಮಿಟ್ ಪಡೆದುಕೊಂಡವರು ತಕ್ಷಣಕ್ಕೆ 80-82 ರೂಪಾಯಿಗಳಿಗೆ ಮಾರುತ್ತಿದ್ದಾರೆ. ಅವರು ಯಾರಾದರೂ ಅಧಿಕಾರಿಗಳ ಶಿಫಾರಸು ಪಡೆದು, 20-30 ಚೀಲಗಳನ್ನು ಕೊಂಡು ಅದನ್ನು ಜಾಸ್ತಿ ಬೆಲೆಗೆ ಸೊಸೈಟಿಯ ಜವಾನರಿಗೇನೇ ಮಾರುತ್ತಿದ್ದಾರೆ. ಈ ರೀತಿ ಮಾಡುತ್ತಿದ್ದಾಗ ಸರ್ಕಾರದವರು ಯಾವ ಒಂದು ಕೂಲಂಕುಷವಾದ ನಿಗಾವನ್ನು ಕೊಡುತ್ತಿಲ್ಲ. ಆದ್ದರಿಂದ ಇಂತಹ ಅಕ್ರಮವಾಗುವುದನ್ನು ಸರ್ಕಾರದವರು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮೊನ್ನೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಖಾದಿ ಭಂಡಾರಗಳ ವಿಚಾರದಲ್ಲಿ ಹೇಳಿದರು,—ಅಲ್ಲಿಯ ಲೆಕ್ಕಪತ್ರಗಳೆಲ್ಲಾ ಇಲ್ಲ ಎಂದು. ಇದು ಬಹಳ ಶೋಚನೀಯವಾದ ಸಂಗತಿ. ದೇಶದ ಜನರ ದುಡ್ಡನ್ನು ಇವರು ಎಷ್ಟು ನಿರ್ಲಕ್ಷ್ಯದಲ್ಲಿ ಖರ್ಚು ಮಾಡುತ್ತಾರೆಂದು ಗೊತ್ತಾಗುತ್ತದೆ. ಇದಕ್ಕೆ ಯಾರು ಕಾರಣರು, ಅವರ ಮೇಲೆ ಶೀಘ್ರ ಕ್ರಮವನ್ನು ತೆಗೆದುಕೊಂಡು ಆದಷ್ಟು ಜಾಗ್ರತೆ ಅದನ್ನು ಸರಿಪಡಿಸಬೇಕು. ಏನು ಇವತ್ತು ನಾವು ಮೆಜಾರಿಟಿಯಲ್ಲಿದ್ದೇವೆ, ಎಂದು ಎಲ್ಲಿಯಾದರೂ ನಿರ್ಲಕ್ಷ್ಯ ಮಾಡಿದರೆ, ಅದನ್ನು ಮುಂದೆ ಯಾವ ಸರ್ಕಾರ ಬಂದಾದರೂ, ಸಂಬಂಧಪಟ್ಟವರಿಂದ ವಸೂಲಿಮಾಡುವ ಸಂದರ್ಭ ಬಂದೀತು ಎಂದು ಹೇಳುತ್ತೇನೆ. ಆದ್ದರಿಂದ ಈಗಲಾದರೂ ಅವರು ಯೋಚನೆ ಮಾಡಿ ಕಾರ್ಯಾಚರಣೆಗೆ ತಂದು ಯಾರು ಜವಾಬ್ದಾರರೋ, ಅವರಿಂದ ಎಲ್ಲವನ್ನೂ ವಸೂಲಿಮಾಡಬೇಕೆಂದು ಹೇಳುತ್ತಿದ್ದೇನೆ. ಈಗ ಕಂದಾಯವನ್ನು ಕೊಡದಿದ್ದರೆ, ಜದರಿಂದ ಯಾವ ರೀತಿ ವಸೂಲು ಮಾಡುತ್ತಾರೋ ಅದೇ ರೀತಿ ಇದನ್ನೂ ವಸೂಲಿ ಮಾಡಿ ವಾಪಸ್ಸು ಸರ್ಕಾರಕ್ಕೆ ಭರ್ತಿ ಮಾಡಬೇಕೆಂದು ಹೇಳುತ್ತೇನೆ.

ಈಗ ದೇಶದಲ್ಲಿ ಆಡಳಿತ ಭದ್ರತೆ ಇಲ್ಲದಂತಾಗಿದೆ. ಎಲ್ಲಿ ನೋಡಿದರೂ ಕಳ್ಳತನ ನಡೆಯುವುದು ವಿಪರೀತವಾಗಿದೆ. ಇತ್ತೀಚೆಗೆ ದೇಶದ ಒಂದು ರಕ್ಷಣೆಗಾಗಿ ಜನಗಳೆಲ್ಲಾ ಬಂಗಾರವನ್ನು ಕೊಟ್ಟರು. ಅದೆಲ್ಲಾ ಇವೊತ್ತು ಹಿತ್ತಾಳೆ ಆಗಿದೆ ಎಂದು ನಾವೆಲ್ಲಾ ಪತ್ರಿಕೆಗಳಲ್ಲಿ ಬಂದದ್ದನ್ನು ಓದಿದ್ದೇವೆ. ಮಂತ್ರಿಗಳು ಯಾವ ಕಡೆಗೆ ಪ್ರವಾಸ ಹೋದರೂ ಹಳ್ಳಿಗಳಲ್ಲಿ ಬರೀ ಹಾರ ತುರಾಯಿಗಳ ಆರ್ಭಟವಾಗಿದೆಯೇ ವಿನಾ ಬೇರೆ ಏನೂ ಇಲ್ಲ. ಅವರು ಸಾಮಾನ್ಯ ಜನರ ಕಷ್ಟ ಸುಖಗಳನ್ನು ವಿಚಾರ ಮಾಡುವುದಿಲ್ಲ. ಇದು ಸರಿಯಲ್ಲ. ಮಂತ್ರಿಗಳು ಜನಗಳ ಹಿತರಕ್ಷಣೆಯನ್ನು ಮಾಡುವುದಕ್ಕೆ ಬೇಕಾದಂತಹ ಕಾರ್ಯಾಚರಣೆಯನ್ನು ನಡೆಸಬೇಕು ಎಂದು ನಾನು ಹೇಳುತ್ತೇನೆ.

(ಶ್ರೀ ಹಾಜಿ ಶಿವಣ್ಣ)

10-30 A.M.

ಇನ್ನು ಈಗಾಗಲೇ ಭಗವತಿ ಕಾಡಿನ ವಿಷಯದಲ್ಲಿ ಕೆಲವು ವಿಚಾರಗಳು ಈ ಸಭೆಯಲ್ಲಿ ಬಂದವು. ಆ ಕಾಡಿನಲ್ಲಿ ಇದ್ದಂಥಹ ಕಂಟ್ರಾಕ್ಟರು ಯಾರು, ಏತಕ್ಕೋಸ್ಕರ ಅಲ್ಲಿ ಲುಕ್ಸಾನಾಯಿತು ಎಂಬುದನ್ನು ವ್ಯವಹರಿಸಿ ಸರ್ಕಾರದವರು ತಿಳಿದುಕೊಳ್ಳಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ಆ ಪ್ರದೇಶದ ಕಂಟ್ರಾಕ್ಟನ್ನು ವಹಿಸಿಕೊಂಡಿದ್ದ ಕಂಟ್ರಾಕ್ಟರೇ ಅದನ್ನು ಸುಟ್ಟರೋ ಏನೋ ಎಂದು ನನ್ನ ಮನಸ್ಸಿಗೆ ಅನುಮಾನ ಉದ್ಭವಿಸಿದೆ. ಬಹಳ ಹಿಂದಿನಿಂದಲೂ ಆ ಕಾಡಿನಿಂದ ಮರಗಳನ್ನು ಕಡಿದು ತರುತ್ತಿದ್ದರು. ಅದು ಒಳ್ಳೆಯ ಸ್ಥಳ. ಅಂಥಾ ಸ್ಥಳದಲ್ಲಿ ಇದ್ದಂತಹ ಕಾಡನ್ನು ಏತಕ್ಕೋಸ್ಕರ ಸುಟ್ಟರೋ ಏನೋ, ಗೊತ್ತಿಲ್ಲ. ಆ ಬಗ್ಗೆ ಸರ್ಕಾರದವರು ವ್ಯವಹರಿಸಿ ಅಲ್ಲಿಂದ ವಿವರಗಳನ್ನು ತರಿಸಿ ಈ ಸಭೆಗೆ ಹೇಳಬೇಕಾಗಿತ್ತು. ಆ ಸ್ಥಳವನ್ನು ದೇವರೇ ಸೃಷ್ಟಿ ಮಾಡಿದ್ದಾನೆ. ಅಂಥಾ ಸ್ಥಳದಲ್ಲಿ ಇದ್ದಂತಹ ಕಾಡನ್ನು ಕಡಿದು ಸುಡಬೇಕಾದರೆ ಅದು ಸರ್ಕಾರದವರ ಬೇಜವಾಬ್ದಾರಿ ಎಂದು ನಾವು ಹೇಳಬೇಕಾಗುತ್ತದೆ. ಈ ರೀತಿ ಸರ್ಕಾರದವರು ಸರಿಯಾದ ರೀತಿಯಲ್ಲಿ ಆಡಳಿತವನ್ನು ನಡೆಸುತ್ತಿಲ್ಲ ಎಂದು ಬೇಕಾದಷ್ಟು ದೂರುಗಳು ಬಂದಿವೆ. ಸರ್ಕಾರದ ಮೇಲೆ ದೂರುಗಳು ಬಂದಾಗ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು, ಅದರಲ್ಲಿಯೂ ಕಾಂಗ್ರೆಸ್ಸಿನಲ್ಲೇ ಇದ್ದಂತಹ ಮಂತ್ರಿಗಳು ತಾವಾಗಿಯೇ ರಾಜೀನಾಮೆಯನ್ನು ಕೊಟ್ಟಂತಹ ನಿದರ್ಶನಗಳು ಬೇಕಾದಷ್ಟು ಇವೆ. ಮಂತ್ರಿಗಳು ತಮ್ಮ ಮೇಲೆ ಆಪಾದನೆಗಳು ಬಂದಾಗ ಅವರು ತಮ್ಮ ಸ್ಥಾನದಲ್ಲಿ ಇರಕೂಡದು. ದೇಶದ ಹಿತದೃಷ್ಟಿಯಿಂದ ಆ ರೀತಿ ಮಂತ್ರಿಗಳು ತಮ್ಮ ಸ್ಥಾನವನ್ನು ಬಿಟ್ಟು ಹೋಗಿರತಕ್ಕ ನಿದರ್ಶನಗಳು ಇವೆ. ಈ ಆಪಾದನೆಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಈ ಮಂತ್ರಿ ಮಂಡಲದವರು ತಮ್ಮ ಸ್ಥಾನವನ್ನು ಬಿಟ್ಟು ಹೋಗತಕ್ಕಂಥಾದ್ದು ಸೂಕ್ತ ಎಂದು ನಾನು ಹೇಳುತ್ತೇನೆ.

†ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಮಾನ್ಯ ಸಭಾಪತಿಗಳೇ, ಹಾಗೂ ಸದಸ್ಯರೇ ಇಂದಿನ ಆಯವ್ಯಯ ಪತ್ರವನ್ನು ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು 24ನೇ ಮಾರ್ಚಿ 1967 ರಲ್ಲಿ ಈ ಸಭೆಯ ಮುಂದೆ ಮಂಡಿಸಿದ್ದಾರೆ. ಈ ವಿಚಾರದಲ್ಲಿ ಹಣ ಯಾವ ರೀತಿ ವ್ಯಯವಾಗುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಅವರ ಗಮನಕ್ಕೆ ತರಬೇಕೆಂದು ನಾನು ಇಚ್ಛಿಸುತ್ತೇನೆ. ಈಗ ಚಿಕ್ಕಮಗಳೂರು ವಿಷಯವನ್ನು ತೆಗೆದುಕೊಳ್ಳುವುದಾದರೆ, ಚಿಕ್ಕಮಗಳೂರಿನ ಅಭಿವೃದ್ಧಿ ವಿಷಯದಲ್ಲಿ ಸರ್ಕಾರದವರು ತಳೆದಿರುವ ನೀತಿಯು ತುಂಬಾ ಅಸಮಾಧಾನಕರವಾಗಿದೆ. ಅದರಲ್ಲಿಯೂ ಕೂಡ ವಿದ್ಯಾಭ್ಯಾಸದ ವಿಷಯದಲ್ಲಿ ಹೇಳುವುದಾದರೆ, ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಎಷ್ಟರಮಟ್ಟಿಗೆ ಸರ್ಕಾರದವರು ಕೊಡುತ್ತಿದ್ದಾರೆ ಎನ್ನುವ ವಿಷಯವನ್ನು ಈ ಸಂದರ್ಭದಲ್ಲಿ ನಾನು ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಚಿಕ್ಕಮಗಳೂರು ನಗರದಲ್ಲಿ ಇರತಕ್ಕ ಸರ್ಕಾರಿ ಹೈಸ್ಕೂಲಿನಲ್ಲಿ 800 ಮಕ್ಕಳು ಓದುವುದಕ್ಕೆ ಬದಲಾಗಿ ಈಗ 1,500 ಮಕ್ಕಳು ಓದುತ್ತಿದ್ದಾರೆ. ಈ ಸ್ಕೂಲಿನಲ್ಲಿ ಇರತಕ್ಕ ಸ್ಥಳಾವಕಾಶ ಕೇವಲ 800 ಮಕ್ಕಳಿಗೆ ಮಾತ್ರ. ಇಂಥಾ ಸ್ಥಳದಲ್ಲಿ ಇವತ್ತು ಒಂದೂವರೆ ಸಾವಿರ ಮಕ್ಕಳು ಓದುತ್ತಿದ್ದಾರೆ. ಈ ಹೈಸ್ಕೂಲು ದೊಡ್ಡಿಯೋಪಾದಿಯಲ್ಲಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅಲ್ಲಿನ ಪೌರ ಸಭೆಯವರು ಕೂಡಲೇ ಬೇರೆ ಒಂದು ಸರ್ಕಾರಿ ಹೈಸ್ಕೂಲನ್ನು ಪ್ರಾರಂಭ ಮಾಡಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದು ಅನೇಕ ಸಾರಿ ಸರ್ಕಾರಕ್ಕೆ ಪ್ರಾರ್ಥನೆಯನ್ನು ಸಲ್ಲಿಸಿದ್ದರೂ ಕೂಡ ಇಲ್ಲಿಯವರೆಗೆ ಸರ್ಕಾರದ ಗಮನ ಆ ಕಡೆ ಹರಿದಿಲ್ಲ. ಈಗಲಾದರೂ ಕೂಡ ಸರ್ಕಾರದವರು ಈ ವಿಷಯವನ್ನು ವಿಚಾರ ಮಾಡಿ ಕೂಡಲೇ ಒಂದು ಸರ್ಕಾರಿ ಹೈಸ್ಕೂಲನ್ನು ಅಲ್ಲಿ ಪ್ರಾರಂಭ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೂ ಇದೇ ರೀತಿಯಲ್ಲಿ ನಮ್ಮ ಚಿಕ್ಕಮಗಳೂರಿಗೆ ಒಂದು ಪ್ರಥಮದರ್ಜೆ ಕಾಲೇಜನ್ನು ಸ್ಥಾಪನೆ ಮಾಡಬೇಕೆಂದು ಅನೇಕ ಬಾರಿ ನಮ್ಮ ಜಿಲ್ಲೆಯವರು ಮಂತ್ರಿಗಳ ಹತ್ತಿರ ಬಂದು ಪ್ರಾರ್ಥನೆಯನ್ನು ಸಲ್ಲಿಸಿದ್ದೆವು. ಸರ್ಕಾರದವರು ನಮ್ಮ ಪ್ರಾರ್ಥನೆಗೆ ಒಂದು ಸರಿಯಾದ ಬೆಂಬಲವನ್ನು ಕೊಡದೆ ಬೇರೆ ಜಿಲ್ಲೆಗೆ ಮಾತ್ರ ಕಾಲೇಜನ್ನು ಕೊಟ್ಟು ನಮ್ಮ ಜಿಲ್ಲೆಗೆ ಸರ್ಕಾರಿ ಕಾಲೇಜನ್ನು ಕೊಡಲು ಸಾಧ್ಯವಿಲ್ಲ, ನೀವು ಪ್ರೈವೇಟ್ ಕಾಲೇಜನ್ನು ಪ್ರಾರಂಭ ಮಾಡುವುದಾದರೆ ಅದಕ್ಕೆ ಸರಿಯಾದ ಉತ್ತೇಜನವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿಕಳುಹಿಸಿದರು. ಆ ಮಾತನ್ನು ನಮಗೆ ಹೇಳಿಕಳುಹಿಸಿದಮೇಲೆ ಪುನಃ ನಮ್ಮ ಪಕ್ಕದ ಜಿಲ್ಲೆಯಾಗಿರತಕ್ಕ ಹಾಸನಾ ಜಿಲ್ಲೆಗೆ ಒಂದು ಸರ್ಕಾರಿ ಕಾಲೇಜನ್ನು ಮಂಜೂರು ಮಾಡಿ ಅದನ್ನು ಹಾಸನದಲ್ಲಿ ಪ್ರಾರಂಭ ಮಾಡಿದರು. ಬೇರೆ ಜಿಲ್ಲೆಯಲ್ಲಿ ಸರ್ಕಾರಿ ಕಾಲೇಜನ್ನು ಪ್ರಾರಂಭ ಮಾಡಿದ್ದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ನಮ್ಮ ಜಿಲ್ಲೆ

ಯಲ್ಲಿ ಸರ್ಕಾರಿ ಕಾಲೇಜನ್ನು ಪ್ರಾರಂಭ ಮಾಡದೆ ಇರುವುದಕ್ಕೆ ನಾನು ವ್ಯಸನ ಪಡುತ್ತೇನೆ. ಇದೇ ರೀತಿ ಯಲ್ಲಿ ಪುನಃ ನಾವು ಸರ್ಕಾರದವರ ಹತ್ತಿರ ಬಂದಾಗ ಸರ್ಕಾರದವರು ಒಂದು ಖಾಸಗಿ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ನಮಗೆ ಅವಕಾಶವನ್ನು ಕಲ್ಪಿಸಿ ಕೊಟ್ಟರು. ನಾವು ಆ ಕಾಲೇಜನ್ನು ಪ್ರಾರಂಭ ಮಾಡಿದ ಒಂದು ವರ್ಷದಲ್ಲಿಯೇ ಹೊಸದಾಗಿ ಎರಡು ಜಿಲ್ಲೆಗಳಲ್ಲಿ ಸರ್ಕಾರಿ ಕಾಲೇಜು ಗಳನ್ನು ತೆರೆಯುವ ತೀರ್ಮಾನಕ್ಕೆ ಸರ್ಕಾರದವರು ಬಂದರು. ಕೋಲಾರ ಜಿಲ್ಲೆಯಲ್ಲಿ ಒಂದು ಕಾಲೇಜನ್ನು ತೆರೆದರು, ಮಂಡ್ಯ ಜಿಲ್ಲೆಯಲ್ಲಿ ಇನ್ನೊಂದು ಕಾಲೇಜನ್ನು ತೆರೆದರು ಆದರೆ ನಮ್ಮದು ಮಾತ್ರ ಖಾಸಗಿ ಕಾಲೇಜಾಗಿಯೇ ಉಳಿಯಿತು. ಈ ಖಾಸಗಿ ಕಾಲೇಜನ್ನಾದರೂ ಕೂಡ ಸರ್ಕಾರಕ್ಕೆ ವಹಿಸಿಕೊಳ್ಳಿ ಎಂದು ನಾವು ಪ್ರಾರ್ಥನೆಯನ್ನು ಮಾಡಿದೆವು. ಎರಡು ಹೊಸ ಸರ್ಕಾರಿ ಕಾಲೇಜನ್ನು ಪ್ರಾರಂಭ ಮಾಡುವ ಸೋಗಿನಲ್ಲಿ ನಮ್ಮ ಕಾಲೇಜನ್ನು ಸರ್ಕಾರಕ್ಕೆ ವಹಿಸಿಕೊಳ್ಳಲು ಒಪ್ಪಿ ಎಂದು ನಾವು ಕೇಳಿದೆವು. ಆಗ ಸರ್ಕಾರದವರು ನಮ್ಮ ಕಾಲೇಜನ್ನು ಸರ್ಕಾರಕ್ಕೆ ತೆಗೆದುಕೊಂಡರು. ಆ ರೀತಿ ಸರ್ಕಾರದವರು ಆ ಕಾಲೇಜನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ನಮಗೆ ಮೂರುವರೆ ಲಕ್ಷ ರೂಪಾಯಿ ಕಾಂಟ್ರಿಬ್ಯೂಷನ್ ಕೊಡಬೇಕೆಂದು ನಿಗದಿ ಮಾಡಿದರು. ಆ ಹಣವನ್ನು ನಾವು ಮಾತ್ರ ಪೂರ್ಣ ಮಾಡಿ ಸರ್ಕಾರಕ್ಕೆ ಕೊಟ್ಟಿದ್ದೇವೆ. ಆದರೆ ಮಂಡ್ಯ ಮತ್ತು ಕೋಲಾರ ಜಿಲ್ಲೆಯವರು ಒಂದು ಪೈಸೆ ಕೂಡ ಕಾಂಟ್ರಿಬ್ಯೂಷನ್ ಕೊಡದೇ ಇರುವುದು ವಿಷಾದಕರ. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂರೂವರೆ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು, ಮಂಡ್ಯ ಮತ್ತು ಕೋಲಾರ ಜಿಲ್ಲೆಗಳಲ್ಲಿ ಆ ಹಣವನ್ನು ಏತಕ್ಕೋಸ್ಕರ ತೆಗೆದುಕೊಳ್ಳಲಿಲ್ಲ ಎಂದು ನಾನು ಮಂತ್ರಿವರ್ಯರನ್ನು ಕೇಳುತ್ತೇನೆ. ಕಾನೂನು ಎಲ್ಲರಿಗೂ ಒಂದೇ ಆಗಿರಬೇಕು, ಚಿಕ್ಕಮಗಳೂರಿಗೇ ಒಂದು ಕಾನೂನು, ಕೋಲಾರ ಮತ್ತು ಮಂಡ್ಯ ಜಿಲ್ಲೆಗಳಿಗೆ ಒಂದು ಕಾನೂನು ಇರಬಾರದು. ಕಾಲೇಜಿಗೋಸ್ಕರ ನಮ್ಮ ಜಿಲ್ಲೆಯಿಂದ ಮೂರೂವರೆ ಲಕ್ಷ ರೂಪಾಯಿಗಳ ಕಾಂಟ್ರಿಬ್ಯೂಷನ್ ತೆಗೆದುಕೊಂಡು ಬೇರೆ ಎರಡು ಜಿಲ್ಲೆಗಳಿಂದ ಆ ಹಣವನ್ನು ಇಲ್ಲಿಯವರೆಗೂ ಏತಕ್ಕೋಸ್ಕರ ವಸೂಲು ಮಾಡಲಿಲ್ಲ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಇದೂ ಅಲ್ಲದೆ ಸರ್ಕಾರದವರು ಇನ್ನೂ ಒಂದು ತಪ್ಪನ್ನು ಮಾಡಿದ್ದಾರೆ. ನಾನು ಮತ್ತೊಮ್ಮೆ ಅದನ್ನು ಬಹಳ ಆಕ್ರೋಶದಿಂದ ಹೇಳಬೇಕೆಂದು ಇಚ್ಛಿಸುತ್ತೇನೆ. ಆ ವಿಷಯವನ್ನು ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಯಾವ ಒಂದು ಅಭಿವೃದ್ಧಿ ಕೆಲಸವನ್ನೂ ಕೂಡ ಸರ್ಕಾರದ ವತಿಯಿಂದ ನೆರವೇರಿಸಿಲ್ಲ. ಅಲ್ಲಿ ಎಲ್ಲಾ ಕೆಲಸಗಳೂ ಸಹ ಸಾರ್ವಜನಿಕರಿಂದಲೇ ನೆರವೇರಿವೆ. ಸಾರ್ವಜನಿಕರು ಯಾವ ಯಾವ ಕೆಲಸಗಳನ್ನು ಮಾಡಿದ್ದಾರೆ ಎಂಬುದಕ್ಕೆ ಕೆಲವು ನಿದರ್ಶನಗಳನ್ನು ನಾನು ಕೊಡುತ್ತೇನೆ. ನಮ್ಮ ಚಿಕ್ಕಮಗಳೂರಿನಲ್ಲಿ ಶ್ರೀ ಮಲ್ಲೇ ಗೌಡರ ಆಸ್ಪತ್ರೆ, ದೊಡ್ಡಸಿದ್ದಲಿಂಗೇ ಗೌಡರ ಮಲೆನಾಡು ಎಜುಕೇಷನ್ ಸೊಸೈಟಿ, ಚಂದ್ರೇ ಗೌಡರ ವಿದ್ಯಾಸಂಸ್ಥೆ, ಕಾನ್‌ವೆಂಟ್ ವಿದ್ಯಾ ಸಂಸ್ಥೆ, ಶಿಶುವಿಹಾರ ಕೇಂದ್ರ ಇತ್ಯಾದಿ ಸಂಸ್ಥೆಗಳನ್ನು ಸಾರ್ವಜನಿಕರ ಹಣದಿಂದ ಪ್ರಾರಂಭ ಮಾಡಿದ್ದಾರೆ. ಸರ್ಕಾರ ಯಾವ ಸಹಾಯವನ್ನೂ ಕೊಡದೆ ಚಿಕ್ಕಮಗಳೂರು ಜಿಲ್ಲೆ ಯನ್ನು ಅನಾದರಣೀಯವಾಗಿ ನೋಡುತ್ತಿದೆ ಎನ್ನುವ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈಗಲಾದರೂ ಕೂಡ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸರ್ಕಾರದವರು ಒಂದು ಮಹಿಳಾ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ಈ ಸಂದರ್ಭದಲ್ಲಿ ಅವರಲ್ಲಿ ನನ್ನ ಕೋರಿಕೆಯನ್ನು ಸಲ್ಲಿಸುತ್ತಿದ್ದೇನೆ.

ಚಿಕ್ಕಮಗಳೂರು ನೀರು ಸರಬರಾಜು ಬಗ್ಗೆ ನಾನು ಮಾತನಾಡಬೇಕೆಂದು ಇಚ್ಛೆಪಡುತ್ತೇನೆ. ನೀರಿನ ವಿಷಯ ದೊಡ್ಡ ಸಮಸ್ಯೆಯಾಗಿದೆ. ಚಿಕ್ಕಮಗಳೂರು ಟೌನಿಗೆ ಸರಬರಾಜು ಮಾಡತಕ್ಕ ನೀರು ಅಲ್ಲಿಯ ಸುಮಾರು 40 ಸಹಸ್ರ ಜನತೆಗೆ ನಿತ್ಯ ಬಳಕೆಗೆ ಬೇಕಾಗಿರುವ ನೀರು. ಇದನ್ನು ಹಿರೇಕೊಳಲೆ ಕೆರೆಯಿಂದ ಸರಬರಾಜು ಮಾಡಬೇಕು. ಇದಕ್ಕಾಗಿ 1952ರಲ್ಲಿ ಒಂದು ಅಂದಾಜನ್ನು ತಯಾರು ಮಾಡಿದರು. ಆ ಅಂದಾಜು ಮೊಬಲಗು 4,94,132 ರೂಪಾಯಿಗಳು. ಆ ಮೇಲೆ 6,94,000 ರೂಪಾಯಿಗಳಿಗೆ ಒಂದು ಅಂದಾಜನ್ನು ಮಾಡಿದರು. ಮೂರನೆ ಸಾರಿ ಎಂದರೆ 1962ರಲ್ಲಿ ತಯಾರಾದ ಅಂದಾಜಿನಲ್ಲಿ ಅದರ ಖರ್ಚು 10,75,000 ರೂಪಾಯಿಗಳಿಗೆ ಏರಿತು. ಎಂದರೆ 10 ವರ್ಷಗಳ ಕಾಲ ತಡವಾದುದರಿಂದ ಅಂದಾಜು 10,75,000 ರೂಪಾಯಿಗಳಿಗೆ ಏರಿತು ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಅಂದಾಜು ಜಾಸ್ತಿಯಾದುದರಿಂದ ಚಿಕ್ಕಮಗಳೂರು ಪುರಸಭೆ ಹೆಚ್ಚುವರಿ ಹಣವನ್ನು ಕೊಡಬೇಕಾಗಿ ಬಂದು ಅದರ ಭಾರ ತೆರಿಗೆದಾರರ ಮೇಲೆ ಬಿತ್ತು ಎಂದು ವ್ಯಸನದಿಂದ ಹೇಳುತ್ತಿದ್ದೇನೆ. ನೀರು ಸರಬರಾಜು ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿಲ್ಲ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಕಾಫಿ ತೋಟಗಳಲ್ಲಿ ಕೈಕೊಳ್ಳುವ ಸ್ಪ್ರೇಯಿಂಗ್, ಪಲ್ಪಿಂಗ್ ಮತ್ತು ಕೆಮಿಕಲ್ ಮೆನ್ಯೂರಿಂಗ್ ಇವುಗಳಿಗೆ ಉಪಯೋಗಿಸಿದ ನೀರು, ಮಲಿನವಾದ ನೀರನ್ನು ಜನಗಳು ಉಪಯೋಗಿಸುತ್ತಿರುವುದರಿಂದ ಜನಗಳ ಆರೋಗ್ಯಕ್ಕೆ ಧಕ್ಕೆ ಬರುತ್ತದೆ ಎನ್ನುವ ವಿಷಯವನ್ನು ಅನೇಕ ಬಾರಿ ಸರ್ಕಾರದ ಮುಂದೆ ಪ್ರಾರ್ಥನೆ ಮೂಲಕ ಸಲ್ಲಿಸಿ ಅದನ್ನು ಸರಿಪಡಿಸಬೇ

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ಕೆಂದು ಹೇಳಿದ್ದರೂ ಕೂಡ ಇಲ್ಲಿಯವರೆಗೂ ಅದನ್ನು ಸರಿಪಡಿಸದೆ ಜನಗಳ ಆರೋಗ್ಯ ಕೆಡುತ್ತಿದೆ ಅಲ್ಲದೆ ಚಿಕ್ಕಮಗಳೂರಿನಲ್ಲಿರುವ 40 ಸಹಸ್ರ ಜನರು ಒಂದು ದಿನ ಅನಾರೋಗ್ಯದಿಂದ ಪರಿತಪಿಸಬೇಕಾಗುತ್ತದೆ. ಇದರಿಂದ ಮಾಸ್‌ಡೆತ್ಸ್ ಆಗತಕ್ಕ ಸಂಭವವಿರುತ್ತದೆ. ಆದಷ್ಟು ಜಾಗ್ರತೆ ಈ ವಿಚಾರದಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಭಗವತಿ ಫಾರೆಸ್ಟ್ ವಿಚಾರದಲ್ಲಿ ನಮ್ಮ ಸ್ನೇಹಿತರು ಅನೇಕ ಜನ ಮಾತನಾಡಿದರು. ಭಗವತಿ ಫಾರೆಸ್ಟ್ ನಮ್ಮ ಜಿಲ್ಲೆಯಲ್ಲಿರುವ ಒಂದು................

Sri K. H. SRINIVAS (Sagar).—Point of order, Sir. ಭಗವತಿ ಫಾರೆಸ್ಟ್ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಬಂದಿತ್ತು. ನಮ್ಮ ಮುಂದೆ ಈಗ ಇರುವುದು ಅಪ್ರೋಪ್ರಿಯೇಷನ್ ಬಿಲ್. ಇದಕ್ಕೆ ಏನೂ ಸಂಬಂಧಪಡದೆ ಇರುವ ವಿಷಯವಾದುದರಿಂದ ಆ ವಿಚಾರದ ಪ್ರಸ್ತಾಪಕ್ಕೆ ಇಲ್ಲಿ ಅವಕಾಶವಿಲ್ಲ.

Sri H. SIDDAVEERAPPA.—There is no point of order Sir.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಭಗವತಿ ಫಾರೆಸ್ಟ್‌ನಲ್ಲಿ ಬೆಂಕಿ ಬಿದ್ದು ಲಕ್ಷಾಂತರ ರೂಪಾಯಿ ನಷ್ಟವಾಗಿದೆ ಎಂದು ನಮಗೆ ಕೇಳಿಬಂದಿದೆ. ಈ ಬೆಂಕಿ ಇನ್ನೂ ಶಮನವಾಗಿಲ್ಲ. ಈಗಲಾದರೂ ಕೂಡ ಸರ್ಕಾರ ಎಚ್ಚರಿಕೆ ವಹಿಸಿ ಅಲ್ಲಿ ಬಿದ್ದಿರುವ ಬೆಂಕಿಯನ್ನು ಶಮನ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧಿಕಾರಿಗಳನ್ನು ವರ್ಗಾವಣೆ ಮಾಡತಕ್ಕ ವಿಚಾರದಲ್ಲಿ ಒಂದು ಮಾತು. ನಮ್ಮ ಜಿಲ್ಲೆಗೆ ಈ ಮಾತು ಬಹಳವಾಗಿ ಅನ್ವಯಿಸುತ್ತದೆ. ಯಾವತ್ತಿಗೂ ಅಧಿಕಾರಿಗಳನ್ನು ಮೇಲಿಂದ ಮೇಲೆ ವರ್ಗ (ಫ್ರೀಕ್ವೆಂಟ್ ಛೇಂಜಸ್) ಮಾಡುತ್ತಿರುತ್ತಾರೆ. ಒಂದು ವರ್ಷ, 8ತಿಂಗಳು, 6ತಿಂಗಳು ಹೀಗೆ ಅಧಿಕಾರಿಗಳನ್ನು ಬದಲಾವಣೆ ಮಾಡುತ್ತಾ ಇರುತ್ತಾರೆ. ಅಧಿಕಾರಿಗಳನ್ನು ಬದಲಾವಣೆ ಮಾಡತಕ್ಕುದು, ಬಿಡತಕ್ಕದು ಸರ್ಕಾರದಲ್ಲಿ ಇರತಕ್ಕ ಮಂತ್ರಿಗಳಿಗೆ ಸಂಭಂಧಪಟ್ಟ ವಿಷಯ ಆದರೆ ಜಿಲ್ಲೆಯ ಆಡಳಿತಕ್ಕೆ ಇದರಿಂದ ತೊಂದರೆಯಾಗುತ್ತಿದೆ. ಕಾನೂನು ಪ್ರಕಾರ ಎರಡು ವರ್ಷಗಳ ಕಾಲವಾದರೂ ಒಬ್ಬ ಅಧಿಕಾರಿಯನ್ನು ಬದಲಾವಣೆ ಮಾಡಬಾರದು, ಆತನ ಮೇಲೆ ಏನಾದರೂ ಆರೋಪಗಳಿದ್ದರೆ ಮಾತ್ರ ಬದಲಾವಣೆ ಮಾಡಬೇಕು ಎಂದು ಇದೆ ಎಂದು ಕಾಣುತ್ತದೆ. ಅಂಥ ಆರೋಪಗಳು ಇದ್ದರೆ ಅವರನ್ನು ಬದಲಾವಣೆ ಮಾಡಬೇಕು. ಇಲ್ಲದೆ ಇದ್ದರೆ ಆಗಿಂದಾಗ್ಗೆ ಬದಲಾವಣೆ ಮಾಡುವುದು ಸೂಕ್ತವಲ್ಲ. ಜಿಲ್ಲೆಯ ಕೆಲಸಕಾರ್ಯಗಳು ಕುಂಠಿತವಾಗುತ್ತವೆ. ಈ ರೀತಿ ನಡೆಯುವುದನ್ನು ಮುಂದುವರಿಸಬಾರದೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇವೆ.

ನನಗೆ ಕೇವಲ 10 ನಿಮಿಷಗಳ ಅವಕಾಶವನ್ನು ಕೊಟ್ಟಿದ್ದಾರೆ. ನನ್ನ ವೇಳೆ ಮುಗಿಯಿತೆಂದು ಸಭಾಪತಿಗಳು ಎಚ್ಚರಿಕೆ ಕೊಡುತ್ತಿದ್ದಾರೆ. ನನಗೆ ಮಾತನಾಡಲು ಅವಕಾಶ ಕೊಟ್ಟ ಸಭಾಪತಿಯವರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಬಿ. ಆರ್. ಧನಂಜಯ್ಯ (ರಾಮನಗರ).—ಸಭಾಪತಿಗಳೇ, 1967ನೇ ಇಸವಿ ಏಪ್ರಿಲ್, ಮೇ, ಜೂನ್ ಮತ್ತು ಜುಲೈ, ಈ ನಾಲ್ಕು ತಿಂಗಳುಗಳಲ್ಲಿ ಸರ್ಕಾರದವರು ವೆಚ್ಚಕ್ಕೆ ಬೇಕಾಗಿರುವ 85,44,33,000 ರೂಪಾಯಿಗಳನ್ನು ಕೇಳುವ ಮಸೂದೆಯನ್ನು ಸಭೆಯ ಮುಂದೆ ಇಟ್ಟಿರುತ್ತಾರೆ.? ಈ ಮಸೂದೆಯನ್ನು ವಿರೋಧಿಸುತ್ತ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ.

ಮೊದಲು ಕಂದಾಯದ ವಿಚಾರವನ್ನು ತೆಗೆದುಕೊಳ್ಳುತ್ತೇನೆ. ಈ ವಿಷಯ ಬಹಳ ಗಹನವಾದುದು. ಸರ್ಕಾರದವರು ಈ ವಿಚಾರದಲ್ಲಿ ಈ ವಿಚಾರದಲ್ಲಿ ಕೂಲಂಕಷವಾಗಿ ಆಲೋಚಿಸಿ ನಮ್ಮ ಮುಂದೆ ತಿಳಿಸಿದ್ದರೆ ಬಹಳ ಚೆನ್ನಾಗಿತ್ತು. ಈಗ ಜಮೀನು ಕಂದಾಯವನ್ನು ಬಿಟ್ಟುಬಿಡುವುದಾಗಿ ಹೇಳಿದ್ದಾರೆ. ಆದರೆ ಅದರ ಹಿಂದೆ, ಕಂದಾಯಕ್ಕೆ ಬದಲು ಬೇರೆ ಏರ್ಪಾಡನ್ನು ಯೋಚಿಸುವುದಾಗಿ ಹಣಕಾಸಿನ ಮಂತ್ರಿಗಳು ಅವರ ಭಾಷಣದಲ್ಲಿ ತಿಳಿಸಿರುತ್ತಾರೆ. ಇದು ಹೇಗಿದೆ ಎಂದರೆ 'ಮುಸುಕಿನೊಳಗಿನ ದೊಣ್ಣೆ' ಇದ್ದ ಹಾಗೆ ಇದೆ. ಪೂರಾ ಕಂದಾಯವನ್ನು ಬಿಡುತ್ತೇವೆ, ಇನ್ನು ಯಾವ ರೀತಿಯ ಕಂದಾಯವನ್ನೂ ಹಾಕುವುದಿಲ್ಲ ಎಂದು ಹೇಳಿದ್ದರೆ ನಾನು ಸರ್ಕಾರವನ್ನು ಹೃತ್ಪೂರ್ವಕವಾಗಿ ವಂದಿಸುತ್ತಿದ್ದೆ. ಅದನ್ನು ಬಿಟ್ಟು ಬೇರೆ ರೀತಿಯ ಕಂದಾಯವನ್ನು ವಿಧಿಸುವುದಾಗಿ ಹೇಳಿರುತ್ತಾರೆ. ಹಾಗಾದರೆ ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸ್, ಬೆಟರ್‌ಮೆಂಟ್ ಲೆವಿ, ವಾಟರ್ ಸೆಸ್, ಈ ಹೊರೆಯನ್ನು ಹೇರುವುದೇ ಆದರೆ ಆಗ ಈಗಿರುವ ಪದ್ಧತಿಗಿಂತ ಇನ್ನೂ ಹೆಚ್ಚಿನ ಹೊರೆಯನ್ನು ರೈತರ ಮೇಲೆ

ಹೇರುತ್ತಿದ್ದೀರಿ ಎಂದು ಗೊತ್ತಾಗುತ್ತದೆ. ರೈತರು ಇದರಿಂದ ಕಷ್ಟವನ್ನು ಅನುಭವಿಸಬೇಕಾಗಿ ಬರುತ್ತದೆ. ಆಗ ಲಂಚ ತಿನ್ನುವ ಅಧಿಕಾರಿಗಳಿಗೆ ಅನುಕೂಲವಾಗಿ, ಅವರ ಕೈಯಲ್ಲಿ ಸಿಕ್ಕಿ ರೈತರು ಬಹಳ ತೊಂದರೆ ಪಡಬೇಕಾಗುತ್ತದೆ. ಹೀಗಾದಲ್ಲಿ 'ಚಿಕಿತ್ಸೆಗಿಂತ ಕಾಯಿಲೆಯೇ ಒಳ್ಳೆಯದು' ಎನ್ನುವಂತಾಗುತ್ತದೆ. ಆದುದರಿಂದ ಈಗಿರುವ ಕಂದಾಯವನ್ನು ವಜಾ ಮಾಡಿ ಬೇರೆ ಯಾವ ರೀತಿಯ ತೆರಿಗೆಯನ್ನೂ ಹಾಕದೆ ರೈತರಿಗೆ ಅನುಕೂಲ ಮಾಡಿಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಹೇಳಿರುವಂತೆ ಮಾಡುವುದನ್ನು ಬಹಳ ವಿಷಾದದಿಂದ ವಿರೋಧಿಸಬೇಕಾಗಿದೆ.

ವಿದ್ಯಾಭ್ಯಾಸದ ವಿಚಾರ ತೆಗೆದುಕೊಂಡರೆ, ರಾಮನಗರ ತಾಲ್ಲೂಕು ಬೆಂಗಳೂರಿಗೆ 35 ಮೈಲು ದೂರದಲ್ಲಿದೆ ವಿದ್ಯಾರ್ಥಿಗಳಿಗೆ ಸರಿಯಾದ ವಿದ್ಯೆಯನ್ನು ಕೊಡುವುದಕ್ಕೆ ಆಗುತ್ತಾ ಇಲ್ಲ, ಕಾರಣ ಏನೆಂದರೆ, ಕಾಲೇಜು ಹೈಸ್ಕೂಲು, ಪ್ರೈಮರಿಸ್ಕೂಲುಗಳು ಸರಿಯಾಗಿ ಇಲ್ಲ. ಅಲ್ಲಿ ಪ್ರೈವೇಟ್ ಸ್ಕೂಲುಗಳು ಇವೆ. ವಿದ್ಯಾರ್ಥಿಗಳು ಬಹಳ ಕಷ್ಟದಲ್ಲಿದ್ದಾರೆ. ಆದುದರಿಂದ ಹೆಚ್ಚು ಹಣ ಕೊಟ್ಟು ವಿದ್ಯಾರ್ಥಿಗಳನ್ನು ಓದಿಸುವಂತೆ ಎಜುಕೇಷನ್ ವಿಚಾರದಲ್ಲಿ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರೈಮರಿಸ್ಕೂಲುಗಳಿಗೆ ಉಪಾಧ್ಯಾಯರುಗಳನ್ನು ಕಳುಹಿಸಿದರೆ ಕಟ್ಟಡ ಕಟ್ಟಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಕೈಗಾರಿಕೆ ವಿಚಾರ – ಕೈಗಾರಿಕೆಯ ವಿಚಾರವಲ್ಲಿ ಹಿಂದೆ ರಾಜ್ಯಪಾಲರು ಹೇಳಿದ್ದಾರೆ. 30 ಮೈಲಿ ಹೊರಗಡೆ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕು ಎಂದು. ಕಾರಣ ಏನೆಂದರೆ ಸಿಟಿಗಳಲ್ಲಿ ಮಾಡಿದರೆ ಜನಗಳಿಗೆ ಆರೋಗ್ಯಕ್ಕೆ ತೊಂದರೆಯಾಗುತ್ತದೆ ಎಂದು ಹೇಳಿದ್ದಾರೆ. ರಾಮನಗರ 30 ಮೈಲಿ ದೂರದಲ್ಲಿದೆ, ನೀರಿನ ಸೌಕರ್ಯ ಇದೆ. ಅರ್ಕಾವತಿ ನದಿ ಹರಿಯುತ್ತದೆ. ಬೆಂಗಳೂರಿಗೆ ಹತ್ತಿರ ಇದೆ ರಾಮೆಟೀರಿಯಲ್ಸ್ ಸಪ್ಲೈ ಮಾಡಿ ಅಲ್ಲಿ ಕೈಗಾರಿಕೆ ಮಾಡಿದರೆ ಒಳ್ಳೆಯದು ಎಂದು ತಿಳಿಸುತ್ತೇನೆ. ವ್ಯವಸಾಯದ ವಿಚಾರ—ವ್ಯವಸಾಯದ ವಿಚಾರದಲ್ಲಿ ನಮ್ಮ ರಾಮನಗರ ಕ್ಷೇತ್ರ ಬಹಳ ಹಿಂದುಳಿದಿದೆ. ಅಲ್ಲಿ ಫೀಡರ್ ಛಾನಲ್ಸ್ ಇಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಫೀಡರ್ ಛಾನಲ್ ಇದೆ, ಅಲ್ಲಿ ಬಹಳ ಚೆನ್ನಾಗಿ ಮಳೆ ಬರುತ್ತದೆ. ನಮ್ಮ ರಾಮನಗರಕ್ಕೆ ರೈತರ ಅನುಕೂಲಕ್ಕಾಗಿ ಫೀಡರ್ ಛಾನಲ್ ಮತ್ತು ಕಾಂಟೂರ್ ಬಂಡಿಂಗ್ ಮಾಡಿಕೊಡುವುದಕ್ಕೆ ವ್ಯವಸಾಯ ಮಂತ್ರಿಗಳು ಹೆಚ್ಚಿನ ಅನುಕೂಲತೆ ಮಾಡಿಕೊಡುತ್ತಾರೆಂದು ತಿಳಿದು ಕೊಂಡಿದ್ದೇನೆ. ರೈತರಿಗೆ ಗೊಬ್ಬರ ಸಾಗಾಣಿಕೆ ಸರಿಯಾಗಿ ಆಗುತ್ತಾ ಇಲ್ಲ. ಮತ್ತು ಅವರಿಗೆ ಹೇಗೆ ಬೆಳೆಯಬೇಕು, ಏನು ಬೆಳೆಯಬೇಕು ಒಂದೂ ಸರಿಯಾಗಿ ಹೇಳುತ್ತಾ ಇಲ್ಲ. ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಹೋಗಿ ಹೇಳಿಕೊಳ್ಳಲು ರೈತರು ಭಯಪಡುತ್ತಾರೆ. ಈ ಪರಿಸ್ಥಿತಿ ಬಂದಿದೆ. ರೈತರ ಹತ್ತಿರ ಸಂಬಂಧಪಟ್ಟ ಅಧಿಕಾರಿಗಳು ಹೋಗಿ ಅವರು ಬೆಳೆಯನ್ನು ಬೆಳೆಯುವುದಕ್ಕೆ ಸಹಾಯಕವಾಗುವಂತೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಂಡು ಇಷ್ಟು ಹೇಳಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸುಬ್ಬರಾವ್ ಹಲಸಿನಾಡು (ಬೈಂದೂರು).—ಮಾನ್ಯ ಸಭಾಪತಿಗಳವರಲ್ಲಿ ನನ್ನ ನಮ್ರ ವಿನಂತಿ. ಹಲವು ವಿಧವ ಕಾರ್ಯಕ್ರಮಗಳನ್ನು ಇಟ್ಟುಕೊಂಡು 1967-68 ರಲ್ಲಿ ಹೇರಳ ಹಣವನ್ನು ತೆಗೆದಿಟ್ಟಿರುವ ಉದ್ದೇಶ ಏನೋ ಒಳ್ಳೆಯದು. ಆದರೆ ಕಾರ್ಯತಃ ಆಗುವಂತೆ ಕಾಣುವುದಿಲ್ಲ. ಉದಾಹರಣೆಯಾಗಿ ನಾನು ಆರಿಸಿ ಬಂದ ಬೈಂದೂರು ಕ್ಷೇತ್ರದಲ್ಲಿ ನಡೆದ ವಿಷಯವನ್ನು ತಮ್ಮ ಅವಗಾಹನೆಗೆ ತರಲು ಇಚ್ಛಿಸುತ್ತೇನೆ. ನಮ್ಮ ಊರಲ್ಲಿರುವ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಮತ್ತು ಕೆಲವು ಪಂಚಾಯತಗಳು ತಮ್ಮವರೇ ಆದ ಕೆಲವು ಕಾಂಗ್ರೆಸ್ ಕಂಟ್ರಾಕ್ಟರರಿಗೆ ಬಾವಿ ಕೆರೆ ತೆರೆಯುವ ಬಗ್ಗೆ ಹಣಗಳನ್ನು ಕೊಟ್ಟರು. ಹೆಚ್ಚಿನ ಕಡೆಗಳಲ್ಲಿ ಬಾವಿ ಕೆರೆಗಳೇ ಆದದ್ದು ಇಲ್ಲ. ಇನ್ನು ಕೆಲವು ಕಡೆಗಳಲ್ಲಿ ಹಳೇಬಾವಿ ಕೆರೆಗಳನ್ನು ತೋರಿಸಿ ಹಣಗಳನ್ನು ದುರುಪಯೋಗ ಮಾಡಿದ್ದು ಕಂಡು ಬರುತ್ತದೆ. ಇನ್ನು ಕೆಲವು ಕಡೆಗಳಲ್ಲಿ ನೀರಿಲ್ಲದ ಬಾವಿ ಕೆರೆಗಳು ಕಂಡು ಬರುತ್ತದೆ. ಇನ್ನು ಒಂದೆರಡು ಕಡೆಗಳಲ್ಲಿ ಸರಕಾರದಿಂದ ಸಿಕ್ಕಿದ ಹಣವನ್ನು ಸರಕಾರಿ ಸ್ಥಳದಲ್ಲಿ ಜನರಿಗೆ ಉಪಯೋಗವಾಗುವಂತೆ ಪಬ್ಲಿಕ್ ಸ್ಥಳದಲ್ಲಿ ಕಟ್ಟಿಸುವ ಬದಲು ತಮ್ಮ ತಮ್ಮ ಸಂಬಂಧಿಕರ ಮನೆಯ ಹತ್ತಿರ ಬಾವಿ ತೋಡಲಾಗುತ್ತದೆ. ಅಂತೆಯೇ ಹಳ್ಳಿಗಳಲ್ಲಿರುವ ರಸ್ತೆ, ಸಂಕ ಸೇತುವೆಗಳು ನ್ಯಾಯವಾಗಿ ಮಾಡಬೇಕಾದಂತಾ ರಸ್ತೆಗಳು ಆಗದೆ, ಸರಕಾರದಿಂದ ಸಿಕ್ಕಿದ ಹಣದಲ್ಲಿ ಅರ್ಧ ಅಂಶ ಹಣವನ್ನೂ ಉಪಯೋಗಿಸದೆ ಸರಕಾರದ ಲೆಕ್ಕಕ್ಕೆ ರಸ್ತೆ ನಿರ್ಮಾಣವಾಯಿತೆಂತ ಲೆಕ್ಕ ಕೊಡುತ್ತಾರೆ. ನೋಡುವವರೇ ಇಲ್ಲ. ಉದಾಹರಣೆಗೆ ಶಂಕರನಾರಾಯಣದಲ್ಲಿ ಒಂದು ರಸ್ತೆ ನಿರ್ಮಾಣವಾಗಿದೆ. 2½ ಮೈಲು ಉದ್ದದ ರಸ್ತೆಗೆ 9,000 ರೂಪಾಯಿ ಬಿಲ್ ಪಾಸು ಮಾಡಿರುತ್ತಾರೆ. ರಸ್ತೆಯಲ್ಲಿ ಮಾತ್ರ ಮನುಷ್ಯರು ತಿರುಗಲು ಸಾಧ್ಯವಿಲ್ಲ ಗಾಡಿ ಹೋಗಲಿಕ್ಕಿಲ್ಲ ಶಿಲೆಕಲ್ಲಿನ ರಾಶಿ ಇರುತ್ತದೆ. ಕಂಟ್ರಾಕ್ಟರರು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನ ಸದಸ್ಯರ ತಂದೆ. ಹೀಗಿರುವುದರಿಂದ ಅವರನ್ನು ಕೇಳುವವರೇ ಇಲ್ಲ.

(ಶ್ರೀ ಸುಬ್ಬರಾವ್ ಹಲ್ಸನಾಡು)

ಆಹಾರ ಸಾಮಗ್ರಿ ವಿಷಯದಲ್ಲಿ ಹೇಳುವುದಾದರೆ, ಅದರಲ್ಲೂ ಬಡಬಗ್ಗರಿಗೆ ಬಹಳ ತರದ ಅನ್ಯಾಯವಾಗುತ್ತದೆ. ತಮಗೆ ಬೇಕಾದವರನ್ನು ನೋಡಿ ಸ್ಟೋರುಗಳನ್ನು ಮಾಡಿಸಿಕೊಟ್ಟರು. ಬಡಬಗ್ಗರು ಹೋದರೆ ಅವರಿಗೆ ಸರಿಯಾಗಿ ಸಿಕ್ಕುವುದೂ ಇಲ್ಲ. ಸಿಕ್ಕಿದರೂ ಅಳತೆಯಲ್ಲಿ ಮೋಸ ಮಾಡಿ ಬಡಬಗ್ಗರನ್ನು ಹಿಂಡುತ್ತಾರೆ ಮತ್ತು ಮನುಷ್ಯರು ತಿನ್ನದಂಥಾ ಅಕ್ಕಿ ಜೋಳ ವಗೈರೆ ಕೊಡುತ್ತಾರೆ. ಸಕ್ಕರೆ ವಿಷಯ ಹೇಳುವುದಾದರೆ, ಹೆಚ್ಚಿಗೆ ಬಡಬಗ್ಗರಿಗೆ ಇಲ್ಲ. ಬಡಬಗ್ಗರ ಹೆಸರಲ್ಲಿ ಖರ್ಚು ಹಾಕಿ ಹೋಟೆಲ್ ವಗೈರೆ ಕಡೆಗೆ ಹೋಗುತ್ತದೆ. ಸರಿಯಾದ ವಿತರಣೆ ಇಲ್ಲ. ಬೇರೆಯವರಿಗೆ ಮಾತನಾಡಲು ಅವಕಾಶವಿಲ್ಲದಂತಾಗಿರುತ್ತದೆ.

ಲೆವಿಯ ವಿಷಯದಲ್ಲಿಯೂ ಸಹಾ ಬಹಳ ಬೇಜಾರಾದ ಸಂಗತಿಯಾಗಿರುತ್ತದೆ. ಲೆವಿ ಎಂತ ಭತ್ತವನ್ನು ವಸೂಲು ಮಾಡುತ್ತಾರೆ. ಅದಾದರೂ ಕ್ರಮವತ್ತಾಗಿ ಇದೆಯೋ? ಇಲ್ಲ ಒಬ್ಬೊಬ್ಬರಿಗೆ ಒಂದೊಂದು ಕ್ರಮ ಬೆಳದಿದೆಯೋ ಇಲ್ಲವೋ ಎಂತ ನೋಡುವುದೂ ಇಲ್ಲ. ಲೆವಿ ವಸೂಲಿ ಕ್ರಮದಲ್ಲಿ ಬಹಳ ತಾರತಮ್ಯ ಇದೆ. ಕೊಟ್ಟವನು ಕೊಟ್ಟ, ಕೊಡದಿದ್ದವನಿಗೆ ಏನೂ ಇಲ್ಲ. ಆದರೆ ಬಡಬೇಸಾಯಗಾರರಿಗೆ ಮಾತ್ರ ತಪ್ಪಿದ್ದಲ್ಲ. ಒತ್ತಾಯದ ಮೇಲೆ ಅವರ ಮನೆನುಗ್ಗಿ ಅವರು ಬೇಸಾಯಕ್ಕೆಂತ ಇಟ್ಟುಕೊಂಡ ಬೀಜವನ್ನು ಸಹಾ ಬಲತ್ಕಾರದಿಂದ ವಸೂಲು ಮಾಡುತ್ತಾ ಇದ್ದಾರೆ. ಮತ್ತೆ ಲೆವಿ ಭತ್ತದ ಧಾರಣೆ ಸಹಾ ಬಡ ವಕ್ಕಲಿಗನಿಗೆ ಅಗಾಧವಾದ ಪೆಟ್ಟು. ಸರಕಾರದವರು ಲೆವಿ ಭತ್ತಕ್ಕೆ ಕೊಡುವ ಧಾರಣೆಗಿಂತ ಕೋರ್ಟು ಧಾರಣೆ ಹೆಚ್ಚು. ಅವಾಗ ಬಡವಕ್ಕಲಿಗನು ತನ್ನ ಧನಿಗೆ ತನ್ನ ಕೈಯಿಂದ ಹೆಚ್ಚಿಗೆ ಹಣವನ್ನು ಸೇರಿಸಿ ಗೇಣಿ ಕೊಡಬೇಕಾಗುತ್ತದೆ. ಆದ್ದರಿಂದ ಲೆವಿ ಧಾರಣೆಯನ್ನೇ ಗೇಣಿ ರೂಪದಲ್ಲಿ ತಕ್ಕೊಳ್ಳುವಂತೆ ಆಗಬೇಕು. ಇನ್ನು ಲೆವಿ ಎಂತ ಭತ್ತವನ್ನು ವಸೂಲು ಮಾಡುತ್ತಾರೆ. ಗೋಡೌನ್ನಿನಲ್ಲಿ ದಾಸ್ತಾನು ಮಾಡುತ್ತಾರೆ. ಕಳೆದ ವರುಷ ವಸೂಲಾದ ಲೆವಿ ಭತ್ತವು ಇನ್ನೂ ಹಲವು ಕಡೆಗಳಲ್ಲಿದೆ. ಸಮಯಕ್ಕೆ ಸರಿಯಾಗಿ ವಸೂಲು ಮಾಡಿದ ಭತ್ತವನ್ನು ಸಕಾಲದಲ್ಲಿ ಅಕ್ಕಿಯನ್ನು ತಯಾರಿಸದೆ ಗೋಡೌನಿನಲ್ಲೇ ಇಟ್ಟು ಯಾರಿಗೂ ಇಲ್ಲದಂತೆ ಮಾಡಿ ಹಾಳುಮಾಡಿದ ವಿಷಯವನ್ನು ತಮ್ಮೆಲ್ಲರ ಮುಂದೆ ತರಲು ಬಹಳ ಬೇಜಾರಾದ ವಿಷಯವಾಗಿರುತ್ತದೆ. ಹಾಗೆ ಹಾಳುಮಾಡುವ ಬದಲು ಆಯಾ ಊರಿನಲ್ಲೇ ವಸೂಲಾದ ಭತ್ತವನ್ನು ಬಡಬಗ್ಗರಿಗೆ ಅಕ್ಕಿಯ ಅಭಾವ ತಲೆದೋರಿದಾಗ ಕೊಟ್ಟಿದ್ದರೆ ಆಹಾರದ ಬೆಲೆಯು ಏರುತ್ತಿದ್ದಿಲ್ಲ. ಬಡಜನರು ಸಂತೋಷದಿಂದ ಒಂದು ಹೊತ್ತಾದರೂ ಗಂಜಿ ಊಟ ಮಾಡಿಕೊಂಡು ಸಂತೋಷ ಪಡುತ್ತಿದ್ದರು.

ಪಂಪು ಸೆಟ್ಟಿನ ವಿಷಯದಲ್ಲಿ ಎರಡು ಮಾತನ್ನು ಆಡಬೇಕೆಂದು ಇದ್ದೇನೆ. ಸರ್ಕಾರದಿಂದ ಸಿಕ್ಕುವಂತಹ ಪಂಪುಸೆಟ್ಟುಗಳು ನಮ್ಮ ಊರಲ್ಲಿ ಬಡ ಬೇಸಾಯಗಾರರಿಗೆ ಸಿಕ್ಕುವುದು ಬಹಳ ದುರ್ಲಭವಾಗಿರುತ್ತದೆ. ಹೆಚ್ಚಿನ ಪಂಪುಗಳು ತಮ್ಮವರೇ ಆದ ಕೆಲವು ದೊಡ್ಡ ದೊಡ್ಡ ಕಾಂಗ್ರೆಸ್ ಜಮೀನುದಾರರಿಗೆ ಎರಡು ಮೂರರಂತೆ ಹೋಗುತ್ತಾ ಇವೆ. ಹೋಗಿಯೂ ಇದೆ. ಈ ಸಂಬಂಧದಲ್ಲಿ ಒಂದು ವಿಷಯ ನಡೆದುದನ್ನು ತಮ್ಮೆಲ್ಲರ ಅವಗಾಹನೆಗೆ ತರಲು ಇಚ್ಛಿಸುತ್ತೇನೆ. ನಮ್ಮ ಕುಂದಾಪುರದ ತಹಶೀಲುದಾರರು ಕಾನೂನಿನ ಪ್ರಕಾರ ಹಣವನ್ನು ತೆಗೆದುಕೊಂಡು ಒಂದು ಪಂಪನ್ನು ಉಪ್ಪಿನ ಕುದ್ರುಗೆ ಅವರಲ್ಲೂ ಒಬ್ಬ ಬಡ ಬ್ರಾಹ್ಮಣನಿಗೆ ಪಾಸು ಮಾಡಿದುದಕ್ಕೆ ಸದರಿಯವರನ್ನು ಕಾರ್ಕಳಕ್ಕೆ ವರ್ಗಾಯಿಸಲಾಯಿತು. ಸದರಿ ಬ್ರಾಹ್ಮಣನಿಗೆ ಕೊಡಬಾರದು ಎಂತಲೂ ಮಾಡಿದರು.

11-00 A.M.

ಇನ್ನು ಪ್ರೊಹಿಬಿಷನ್ ವಿಷಯ ಹೇಳುವುದಾದರೆ, ಬಹಳ ವ್ಯಸನವಾಗುತ್ತದೆ ಮತ್ತು ದುಃಖವೂ ಬರುತ್ತದೆ. ನಾನು ಎಲೆಕ್ಷನ್ ಸಮಯದಲ್ಲಿ ಹಳ್ಳಿಗಳಲ್ಲಿ ತಿರುಗಾಡುವಾಗ ನೋಡಿದ್ದೇನೆ. ಸಾಯಂಕಾಲ ಐದು ಗಂಟೆಯ ನಂತರ ರಸ್ತೆಯ ಮೇಲೆ, ಓಣಿಗಳಲ್ಲಿ ತಿರುಗಲಿಕ್ಕೇ ಸಾಧ್ಯವಿಲ್ಲ. ಕುಡುಕರ ಹಾವಳಿ ಬಹಳ ಹೆಚ್ಚು. ಅವರವರ ಮನೆಗಳಿಗೆ ಹೋಗಲಿಕ್ಕೂ ಮತ್ತು ಮಾತಾಡಲೂ ಸಾಧ್ಯವಿಲ್ಲ. ಅವರಿಗೆ ಸ್ಮೃತಿಯೇ ಇರುವುದಿಲ್ಲ. ನಮ್ಮ ಇಂಗ್ಲೀಷರ ಕಾಲದಲ್ಲಾದರೆ ಊರಿಗೆ ಒಂದು ಯಾ ಎರಡು ಗಡಂಗುಗಳು ಇದ್ದವು. ಈಗಲಾದರೆ ಹಾಗಲ್ಲ. ಮನೆ ತಪ್ಪದೆ ಸಾರಾಯಿ ಬಟ್ಟಿಗಳು ತಯಾರಾಗುತ್ತ ಇವೆ. ಇದರಿಂದ ಏನಾಯಿತು ಎಂದರೆ ನಮ್ಮ ಸರ್ಕಾರಕ್ಕೆ ಉತ್ಪತ್ತಿ ಇಲ್ಲ. ಪೋಲೀಸು ಇಲಾಖೆಯವರಿಗೆ ತುಂಬಾ ಲಾಭದಾಯಕವಾಯಿತು. ಒಂದೊಂದು ಪೋಲೀಸು ಸ್ಟೇಷನ್ನಿಗೆ ತಿಂಗಳೊಂದಕ್ಕೆ ಮೂರು ಸಾವಿರದಿಂದ ಐದು ಸಾವಿರದವರೆಗೆ ಉತ್ಪತ್ತಿ ಬರುವುದಕ್ಕೆ

ಅವಕಾಶವಾಯಿತು. ದಿನೇ ದಿನೇ ಕುಡಿಯುವವರ ಸಂಖ್ಯೆ ಏರುತ್ತಾ ಬಂತು. ಆದ್ದರಿಂದ ಹಿಂದಿನ ಕ್ರಮದಂತೆ ಅಂಗಡಿಗಳನ್ನು ತೆರೆದಲ್ಲಿ ಸರಕಾರಕ್ಕೂ ಹಣ ಬರುತ್ತದೆ ಮತ್ತು ಕುಡುಕರೂ ಕೂಡ ಕಡಮೆಯಾಗುತ್ತಾರೆ.

ಇನ್ನು ಆಸ್ಪತ್ರೆಗಳ ವಿಷಯ. ನಮ್ಮ ಸರಕಾರದವರು ಆರೋಗ್ಯದ ಖಾತೆಗೆ ತುಂಬಾ ಶ್ರದ್ಧೆ ಇಟ್ಟಿರುವುದು ಬಹಳ ಸಂತೋಷಕರ. ಹಳ್ಳಿಗಳ ಮೂಲೆಯಲ್ಲಿ ಆಸ್ಪತ್ರೆಗಳನ್ನು ತೆರೆಯುತ್ತಾ ಹೋಗುತ್ತಾರೆ. ಆದರೆ ಅನೇಕ ಕಡೆಗಳಲ್ಲಿ ಡಾಕ್ಟರುಗಳೇ ಇರುವುದಿಲ್ಲ. ಡಾಕ್ಟರುಗಳು ಇದ್ದರೆ ಔಷಧಿಗಳೇ ಇರುವುದಿಲ್ಲ. ಹಾಗೆ ಮಾಡುವುದಕ್ಕಿಂತ ಆಸ್ಪತ್ರೆಗಳನ್ನು ತೆರೆದ ಕಡೆಗಳಲ್ಲಿ ಸುವ್ಯವಸ್ಥೆಯಂತೆ ಮಾಡಿದರೆ ಅದರಿಂದ ಜನರಿಗೆ ಬಹಳ ಉಪಕಾರವಾಗುತ್ತಿತ್ತು. ಉದಾಹರಣೆಯಾಗಿ ಹೇಳುವುದಾದರೆ, ನಮ್ಮ ಬೈಂದೂರು ಮತ್ತು ಗಂಗೊಳ್ಳಿ ಆಸ್ಪತ್ರೆ ತೆಗೆದುಕೊಂಡರೆ ತಿಳಿಯುತ್ತದೆ. ಇಲ್ಲಿರುವ ಆಸ್ಪತ್ರೆಗಳಲ್ಲಿ ಸರಿಯಾಗಿ ಔಷಧಿಗಳೇ ಸಿಗುತ್ತಿಲ್ಲ.

ಇನ್ನು ಶಾಲೆಯ ವಿಷಯ ನೋಡಿದರೆ, ಹಳ್ಳಿ ಹಳ್ಳಿಗಳಲ್ಲಿ ಕೆಲವರನ್ನು ಸಂತೋಷಪಡಿಸಲಿಕ್ಕಾಗಿ ಶಾಲೆಗಳನ್ನು ತೆರೆಯುತ್ತಾ ಹೋಗುತ್ತಾರೆ. ಕೆಲವು ಶಾಲೆಗಳಲ್ಲಿ ಸರಾಸರಿ ಹತ್ತು ವಿದ್ಯಾರ್ಥಿಗಳು ಕೂಡ ಇರುವುದಿಲ್ಲ ಹಾಗಿದ್ದರೂ ಹಳ್ಳಿ ಹಳ್ಳಿಗಳಲ್ಲಿ ಶಾಲೆ ತೆರೆಯುತ್ತಾರೆ. ಆದರೆ ಸರಿಯಾದ ಕಟ್ಟಡಗಳು ಶಾಲೆಗಳಿಗೆ ಇಲ್ಲ. ಮರದ ಅಡಿಯಲ್ಲೋ ಅಥವಾ ಬೇರೆ ಎಲ್ಲಾದರೂ ಕುಳಿತು ಪಾಠ ಕಲಿಯಬೇಕಾದ ಸ್ಥಿತಿಗಳಿವೆ.

[MR. SPEAKER in the chair]

ಮೀನುಗಾರಿಕೆ ವಿಷಯ ಹೇಳುವುದಾದರೆ, ನಮ್ಮ ಬೈಂದೂರು ಕ್ಷೇತ್ರದಲ್ಲಿ ಬಹಳ ಮಂದಿ ಮೀನು ವ್ಯವಸಾಯದಲ್ಲಿ ತೊಡಗಿದ್ದಾರೆ. ಅದರಿಂದಲೇ ಜೀವನವನ್ನು ನಡೆಸುತ್ತಿದ್ದಾರೆ. ಆದರೆ ಅವರಿಗೆ ಈ ಸರಕಾರದಿಂದ ಹೆಚ್ಚಿನ ಸೌಲಭ್ಯ ಸಿಕ್ಕಿದ್ದು ಕಾಣುವುದಿಲ್ಲ. ದಯವಿಟ್ಟು ಸರಕಾರ ಸದರಿ ಮೀನು ವ್ಯವಸಾಯ ಮಾಡುವವರಿಗೆ ಅವರಿಗೆ ಸಿಗುವ ಸೌಲಭ್ಯವನ್ನು ಇನ್ನಾದರೂ ಸರಿಯಾಗಿ ಸಿಗುವಂತೆ ಮಾಡಬೇಕಾಗಿ ಪ್ರಾರ್ಥನೆ.

ಇನ್ನು ಅರಣ್ಯಗಳ ವಿಷಯವನ್ನು ಹೇಳುವುದಾದರೆ, ನಮ್ಮ ಮದ್ರಾಸು ಸರಕಾರ ಇರುವಾಗ ಬೇಸಾಯಗಾರರಿಗೆ ಕಾಡಿನಲ್ಲಿ ಬೀಳುವ ಸೊಪ್ಪು ಹಾಗೂ ತರಗೆಲೆಗಳನ್ನು ತೆಗೆದುಕೊಂಡು ಹೋಗಲು ಬಿಡುತ್ತಿದ್ದರು. ಆದರೆ ಈಗ ಮಾತ್ರ ಬೇಸಾಯಗಾರರಿಗೆ ಆ ಪ್ರಯೋಜನವೇನೂ ಸಿಕ್ಕುವುದಿಲ್ಲ. ಬೇಸಾಯಗಾರರು ಕಾಡಿನ ಹತ್ತಿರ ಹೋಗಲು ಬಿಡುವುದಿಲ್ಲ. ಹಾಗಿದ್ದರೂ ಸರಕಾರಿ ಕಾಡುಗಳಲ್ಲಿರುವ ಮರಗಳನ್ನು ಕಡಿದು ಮಾರಾಟ ಮಾಡಿದರೂ ಯಾರೂ ಕೇಳುವವರಿಲ್ಲದ ಪರಿಸ್ಥಿತಿಗೆ ಬಂದಿರುತ್ತದೆ. ಎಲ್ಲಿಯಾದರೂ ನಿಷ್ಠೆಯಿಂದ ಕೂಡಿದ ಆಫೀಸರು ಅಂತಹ ಅಕ್ರಮಗಳನ್ನು ಹಿಡಿದು ನಂಬರು ಮಾಡಿದರೆ ನಮ್ಮ ಕಾಂಗ್ರೆಸ್ಸು ಮುಖಂಡರುಗಳು 24 ತಾಸಿನೊಳಗಾಗಿ ಅವರನ್ನು ನೀರಿಲ್ಲದ ಊರಿಗೆ ವರ್ಗಾಯಿಸಿಬಿಡುತ್ತಾರೆ. ಆದ್ದರಿಂದ ನಿಷ್ಠಾವಂತ ಆಫೀಸರುಗಳು ಹೊಟ್ಟೆಯ ಪಾಡಿಗಾಗಿ ಕಣ್ಣುಮುಚ್ಚಿಕೊಂಡು ಕೆಲಸ ಮಾಡುವ ಪರಿಸ್ಥಿತಿಗೆ ಬಂದಿರುತ್ತದೆ.

ಕೊನೆಯದಾಗಿ ನಮಗೆ ಮೈಸೂರುರಾಜ್ಯ ಬಂತು. ರಾಮ ರಾಜ್ಯವಾಗಬಹುದು ಎಂದು ಭಾವಿಸಿದ್ದೆವು. ಆದರೆ ಈಗ ನೋಡುವುದೇನು? ರಾಮ ರಾಜ್ಯವಲ್ಲ, ರಾವಣ ರಾಜ್ಯವಾಗಿರುತ್ತದೆ. ಎಲ್ಲಿ ನೋಡಿದರೂ ಲಂಚಗುಳಿತನವೇ ತುಂಬಿ ಹೋಗಿದೆ. ರಿಜಿಸ್ಟ್ರೇಷನ್ ಆಫೀಸಿಗೆ ಹೋಗಲು, ಅಲ್ಲಿ ಒಂದು ಪತ್ರ ರಿಜಿಸ್ಟರು ಆಗಬೇಕಾದರೆ, ಆ ಡಾಕ್ಯುಮೆಂಟಿನ ಸಂಗಡ ಹತ್ತು, ಹದಿನೈದು ರೂಪಾಯಿಗಳನ್ನು ಕಳುಹಿಸಬೇಕು . ಇಲ್ಲವಾದರೆ ಆ ಪತ್ರ ರಿಜಿಸ್ಟರೇ ಆಗುವುದಿಲ್ಲ.

ಇನ್ನು ವರ್ಗಾವರ್ಗಿ ವಿಚಾರ ಕೇಳಿದರೆ ಮತ್ತಷ್ಟು ರೋಮಾಂಚನವಾಗುತ್ತದೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡಬೇಕಾದರೆ ವರ್ಗ ಮಾಡುವ ಗುಮಾಸ್ತನಿಗೆ ವರ್ಗವನ್ನು ಅಪೇಕ್ಷಿಸುವವನ ವರಮಾನದ ಮೇಲೆ ರೂಪಾಯಿ 50 ರಿಂದ 500 ರೂಪಾಯಿಗಳವರೆಗೆ ಮಾಮೂಲು ಕೊಡಬೇಕಂತೆ. ಕಂಬ ಕಂಬಗಳೆಲ್ಲಾ ಮಾತಾಡಲು ಹತ್ತಿರುತ್ತದೆ. ಹೀಗಾದರೆ ಬಡ ನೌಕರರುಗಳ ಪಾಡೇನು? ಇನ್ನೂ ಹೇಳುವುದಾದರೆ ಬಹಳ ವಿಷಯಗಳು ಇವೆ. ಮಾನ್ಯ ಸರಕಾರದವರು ಇನು ಮುಂದೆ ಇಂತಹ ಅವ್ಯವಸ್ಥೆಗಳು ಆಗದಂತೆ ತಕ್ಕ ವ್ಯವಸ್ಥೆ ಮಾಡಿ ಬಡಬಗ್ಗರಿಗೂ ಬಡ ನೌಕರರುಗಳಿಗೂ ನ್ಯಾಯ ದೊರಕುವಂತೆ ಮತ್ತು ಕೊಟ್ಟಿರುವ ಹಣವನ್ನು ನ್ಯಾಯವಾದ ರೀತಿಯಲ್ಲಿ ಉಪಯೋಗವಾಗುವಂತೆ ಮಾಡಬೇಕಂತ ತಮ್ಮ ಮೂಲಕ ಸರಕಾರಕ್ಕೆ ಹೇಳಿಕೊಂಡು ನನ್ನ ಮಾತನ್ನು ಇಲ್ಲಿಗೆ ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಅಪ್ರೋಪ್ರಿಯೇಷನ್ ಬಿಲ್ಲು ಬಂದಿರತಕ್ಕದ್ದು ಸಪ್ಲಿಮೆಂಟರಿ ಗ್ರಾಂಟುಗಳಿಗೆ ಸಂಬಂಧಪಟ್ಟದ್ದು ವೋಟ್ ಅನ್ ಅಕೌಂಟಿಗೆ ಸಂಬಂಧಪಟ್ಟದ್ದು ಅಲ್ಲ. ಈ ವಿಚಾರವನ್ನು ಈ ಸಭೆಯಲ್ಲಿ ಮಾತನಾಡಿದ ಮಾನ್ಯ ಸದಸ್ಯರು ಮರೆತಂತೆ ಕಾಣುತ್ತದೆ. ಏಕೆಂದರೆ ಅವರು ಮಾತಾಡಿದ ವಿಚಾರಗಳನ್ನು ನೋಡಿದರೆ ಬರುವ ವರ್ಷದ ಬಡ್ಜೆಟ್ಟಿನ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಅದು ಹೇಗಾದರೂ ಇರಲಿ ಹೊಸ ವಿಚಾರವೇನನ್ನೂ ಹೇಳಲಿಲ್ಲ.

ಶ್ರೀಮಾನ್ ವಾಟಾಳ್ ನಾಗರಾಜ್ ಪ್ರೊಹಿಬಿಷನ್ ವಿಚಾರದಲ್ಲಿ ಬಹಳ ಕಟುವಾಗಿ ಮಾತಾಡಿದರು. ಅವರಿಗೆ ಕೆಲವು ಶಬ್ದಗಳು ಸಲೀಸಾಗಿ ಬರುತ್ತವೆ, ಮತ್ತು ಅದನ್ನು ಆಗಾಗ್ಗೆ ಪ್ರಯೋಗ ಮಾಡುತ್ತಾರೆ.

ಅಧ್ಯಕ್ಷರು.—ಅವರು ಶಾಪ ಕೊಡುತ್ತೇವೆ ಎಂದು ಹೇಳಿದರು.

ಶ್ರೀ ರಾಮಕೃಷ್ಣ ಹೆಗಡೆ—ಶಾಪ ಕೊಡುವುದಕ್ಕೆ ಅವರಿಂದ ಎಷ್ಟುಮಟ್ಟಿಗೆ ಆಗುತ್ತೋ ಅದು ಅವರಿಗೇ ಇರಲಿ. ಅವರ ಪುನಃ ಪುನಃ He professes that he is an agitator. Perhaps he is a professional agitator. ಅದು ಹೇಗಾದರೂ ಇರಲಿ. ನಮ್ಮ ಬೆಂಗಳೂರು ಶಹರಿನಲ್ಲಿ ಮತ್ತು ಬೆಂಗಳೂರು ಜಿಲ್ಲೆಯ ಬಹು ಭಾಗದಲ್ಲಿ ಪಾನ ನಿರೋಧವನ್ನು ನಾವು ಎಂದೂ ಜಾರಿಗೆ ತರಲಿಲ್ಲ. ನನಗೆ ಗೊತ್ತಿದ್ದಮಟ್ಟಿಗೆ ಬೆಂಗಳೂರು ನಗರವಾಸಿಗಳಾದ ಶ್ರೀಮಾನ್ ವಾಟಾಳ್ ನಾಗರಾಜರವರು ಪಾನ ನಿರೋಧ ಎಲ್ಲಿ ತರಬಹುದು ಎಂದಾಗಲಿ ಅಥವಾ ಪಾನ ನಿರೋಧವನ್ನು ತಡೆಯಬೇಕೆಂದಾಗಲಿ ಅದಕ್ಕೆ ವಿರೋಧವಾಗಿ ಚಳುವಳಿ ಹೂಡಿದ್ದು ನನಗೆ ಗೊತ್ತಿಲ್ಲ. ಈಗ ಒಮ್ಮೆಲೆ ಇದ್ದಕ್ಕಿದ್ದಂತೆ ಪಾನ ನಿರೋಧವನ್ನು ತಡೆಯಬೇಕು ಎನ್ನುವ ಅಭಿಪ್ರಾಯವನ್ನು ಹೇಳಿ ಅದನ್ನು ಮಾಡದಿದ್ದರೆ ಚಳುವಳಿ ಹೂಡುತ್ತೇನೆ ಎಂದು ಹೇಳಿದುದರ ಅರ್ಥ ನನಗೆ ಗೊತ್ತಾಗಲಿಲ್ಲ. ನಿನ್ನೆ ಈ ಸಭೆಯ ಮುಂದೆ ಹೇಳಿದ್ದೆ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಆ ಭಿನ್ನಾಭಿಪ್ರಾಯಗಳನ್ನು ಎಲ್ಲ ಕಡೆಯಿಂದಲೂ ತೆಗೆದುಕೊಂಡು ಕೊನೆಗೆ ಯಾವ ತರಹ ಅಭಿಪ್ರಾಯಕ್ಕೆ ಬರಬೇಕು ಎನ್ನುವುದನ್ನು ನೋಡಿಕೊಂಡು ಸರಕಾರ ನಿರ್ಧಾರ ಮಾಡುತ್ತದೆ.

ಶ್ರೀಮಾನ್ ಶಿವಪ್ಪನವರು ಈ ಬಿಲ್ಲಿಗೆ ಸಂಬಂಧಪಡದ ಒಂದು ವಿಚಾರವನ್ನು ಇಲ್ಲಿ ಹೇಳಿದರು. ನಿನ್ನೆ ನಾನು ಮೈಸೂರು ಮಂತ್ರಿಮಂಡಲವನ್ನು ಇನ್ನೂ ಸ್ವಲ್ಪ ವಿಸ್ತಾರ ಮಾಡುವ ಅಭಿಪ್ರಾಯವಿದೆ ಎಂದು ತಿಳಿದುಕೊಂಡು ಅವರೇತಕ್ಕೆ ಭಯವಾಗುತ್ತದೆ ಎಂದು ಹೇಳಿದರೋ ನನಗೆ ಗೊತ್ತಿಲ್ಲ. ಅವರು ಇಲ್ಲಿರುವ ಮಂತ್ರಿಮಂಡಲದ ಕೆಲವು ಸದಸ್ಯರುಗಳು ವಿರೋಧಪಕ್ಷದಲ್ಲಿರುವ ಸದಸ್ಯರನ್ನು ಇತ್ತಕಡೆಗೆ ಕರೆದುಕೊಂಡು ಬರಬಹುದು ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ ಎಂದು ಹೇಳಿರುವುದು ಸತ್ಯಕ್ಕೆ ಬಹು ದೂರವಾದ ವಿಚಾರ. ಇಲ್ಲಿ ಒಂದು ವಿಚಾರವನ್ನು ಹೇಳುತ್ತೇನೆ. ಆಳುವ ಪಕ್ಷಕ್ಕೆ ಸಾಕಷ್ಟು ಬಹುಮತವಿದೆ. ಮತ್ತು ವಿರೋಧಪಕ್ಷದ ಸದಸ್ಯರು ಆ ಪಕ್ಷವನ್ನು ಒಡೆದುಕೊಂಡು ಬರಬೇಕು ಎನ್ನುವ ವಿಚಾರ ನಮಗಿಲ್ಲ. ಆದರೆ ವಿರೋಧ ಪಕ್ಷದ ಸದಸ್ಯರುಗಳು ಕಾಂಗ್ರೆಸ್ ತತ್ವಗಳನ್ನು ಒಪ್ಪಿಕೊಂಡು ನಮ್ಮ ಪಕ್ಷಕ್ಕೆ ಸೇರುತ್ತೇವೆ ಎಂದು ಬಂದರೆ ಅವರಿಗೆ ನಾವು ಸ್ವಾಗತ ಮಾಡುತ್ತೇವೆ ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇದರಲ್ಲಿ ಆಶ್ಚರ್ಯವೇನು ಎಂದರೆ, ಯಾವ ತಪ್ಪನ್ನು ವಿರೋಧಪಕ್ಷದವರು ಮಾಡಿದ್ದಾರೋ ಅದನ್ನು ಬಿಟ್ಟು ಆಡಳಿತ ಪಕ್ಷದವರ ಮೇಲೆ ಅಪಾದನೆ ಮಾಡಿದರು.

ವಿರೋಧಪಕ್ಷದ ಅನೇಕ ಸದಸ್ಯರುಗಳು ಕೆಲವು ದಿವಸಗಳ ಹಿಂದೆ ಒಂದೆಡೆ ಸಭೆ ಸೇರಿ ಇನ್ನು ಒಂದು ಅಥವಾ ಒಂದೂವರೆ ವರ್ಷದಲ್ಲಿ ಈಗಿರುವ ಆಡಳಿತವನ್ನು ಕೆಳಗಿಳಿಸುತ್ತೇವೆಂದು ಜಾಹಿರಾತನ್ನು ಕೊಟ್ಟಿದ್ದಾರೆ. ಈ ರೀತಿಯ ಪ್ರಯತ್ನ ಯಾವ ಕಡೆಯಿಂದ ಆಗುತ್ತದೆಯೆಂಬುದು ನಮಗೆ ಗೊತ್ತಿದೆ. ಇನ್ನು ಹೆಚ್ಚು ಹೇಳುವುದಿಲ್ಲ. ಸದಸ್ಯರುಗಳು ಹೊಸ ವಿಚಾರ ಯಾವುದನ್ನೂ ಪ್ರಸ್ತಾಪ ಮಾಡಿಲ್ಲ. ಈ ಬಿಲ್ಲನ್ನು ಮಾನ್ಯ ಸಭೆಯು ಅಂಗೀಕಾರ ಮಾಡಬೇಕೆಂದು ಬೇಡುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಒಂದು ಮುಖ್ಯ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಕೆಲವು ದಿವಸಗಳ ಹಿಂದೆ ಬೆಲೆಗಳು ಏರಿದ್ದರಿಂದ ಕೆಳದರ್ಜೆ ನೌಕರರು ಕೆಲವು ದಿವಸ ಮುಷ್ಕರವನ್ನು ಹೂಡಿದ್ದರು. ಆ ವಿಚಾರ ತಮಗೆ ಗೊತ್ತಿದೆ. ಆಗ ಸರ್ಕಾರದವರು ಆ ವಿಚಾರವನ್ನು ಪರಿಶೀಲನೆ ಮಾಡಿ ಹೆಚ್ಚಿನ ತುಟ್ಟಿಭತ್ಯವನ್ನು ಕೊಟ್ಟರು. ಕೆಲವರ ಮೇಲೆ ಹಾಕಿದ್ದ ಕೇಸ್‌ಗಳನ್ನು ವಾಪಸ್ ತೆಗೆದುಕೊಂಡರು. ಆ ಕಾಲಕ್ಕೆ ಮಾನ್ಯ ಮುಖ್ಯಮಂತ್ರಿಗಳು ನೌಕರರಿಗೆ ಯಾವ ತರಹವಾದ ತೊಂದರೆಯನ್ನೂ ಕೊಡುವುದಿಲ್ಲವೆಂದು ಹೇಳಿದರು. ಆದರೂ ಸಹ ತಮಗೆಲ್ಲಾ ಗೊತ್ತಿರುವಂತೆ ಒಂದು ಸರ್ಕ್ಯುಲರನ್ನು ಹೊರಡಿಸಿ

ನೌಕರರು ಎಷ್ಟು ದಿವಸ ಗೈರ್ ಹಾಜರಾಗಿದ್ದಾರೋ ಅಷ್ಟು ದಿವಸವನ್ನು ಸಂಬಳವಿಲ್ಲದ ರಜಾ ಎಂದು ಮಾಡಿದರು. ಆ ಒಂದು ಸರ್ಕ್ಯುಲರನ್ನು ವಾಪಸ್ ತೆಗೆದುಕೊಳ್ಳಲಿಲ್ಲ. ಇದರಿಂದ ನೌಕರರಿಗೆ ಮುಂದೆ ಸರ್ವಿಸ್ ವಿಚಾರದಲ್ಲಿ ತೊಂದರೆಯಾಗುತ್ತದೆ. ಬೆಲೆಗಳು ಯಾವ ರೀತಿ ಹೆಚ್ಚಿದೆ ಎಂಬುದು ತಮಗೆ ಗೊತ್ತಿದೆ. ತಮ್ಮ ಬಜೆಟ್ ಭಾಷಣದಲ್ಲೂ ಸಹ ಆ ವಿಚಾರವನ್ನು ಹೇಳಿದ್ದೀರಿ. ಹಸಿದ ಮನುಷ್ಯ ಅನ್ನ ಕೇಳುವುದು ಒಂದು ಸ್ವಭಾವ. ಈಗ ಸರ್ಕಾರದವರು ಕೊಂಚ ಮಟ್ಟಿಗೆ ಸಹಾಯ ಮಾಡಿದ್ದಾರೆ. ಅದರಂತೆ ಈ ಸರ್ಕ್ಯುಲರನ್ನು ಸಹ ವಾಪಸ್ ತೆಗೆದುಕೊಳ್ಳುವ ಬಗ್ಗೆ ಹೇಳಿಕೆ ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಇದು ಆಡಳಿತಕ್ಕೆ ಸಂಬಂಧಪಟ್ಟ ವಿಚಾರವಾದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

Mr. SPEAKER.—I will put the Bill to the vote of the House. The question is :

"That the Mysore Appropriation Bill, 1967. Be taken into consideration."

The motion was adopted.

CLAUSES.

Mr. SPEAKER.—I will put the clauses of the Bill. The question is :

"That clauses 2 and 3 stand part of the Bill."

The motion was adopted.

Clauses 2 and 3 were added to the Bill.

SCHEDULE

Mr. SPEAKER.—The question is :

"That the Schedule stand part of the Bill."

The motion was adopted.

The Schedule was added to the Bill.

CLAUSE 1, ETC.

Mr. SPEKAER.—The question is ;

"That clause 1 the Title and the Preanble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri RAMAKRISHNA HEGDE.—Sir, I beg to move :

"That the Mysore Appropriation Bill, 1967, be passed."